
# ಕೊರವಂಜಿ



*Koravanji*

ಡಿಸೆಂಬರ್

೧೯೫೪

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ರೇವಣ್ಣ
ಶ್ರೀ॥ ಪಾಟೀಲಿ
ಶ್ರೀ॥ ರಾಮಕೃಷ್ಣ
ಶ್ರೀ॥ ಹಾ. ರಾ.
ಶ್ರೀ॥ "ಕೇಫ"
ಶ್ರೀ॥ ಅಳ್ಳೀಗನೂರ
ಶ್ರೀ॥ ಅ. ರಾ. ಸೇ.
ಶ್ರೀ॥ ಇಂದುಮತಿ
ಶ್ರೀ॥ ತಾಯೂರು ರಾಮಚಂದ್ರನ್
ಶ್ರೀ॥ ಬಿ. ಎನ್. ಮೂರ್ತಿ
ಶ್ರೀ॥ ನಾ. ಕಸ್ತೂರಿ
ಶ್ರೀ॥ ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿಪ್ರತಿ
ಕೆಲವಾಣೆ

ಮನೆಗೆ ಶಾಂತಿ ! ಮನಕ್ಕೆ ಶಾಂತಿ !! ದೇಹಕ್ಕೆ ವಿಶ್ರಾಂತಿ !!!

**ಕಣ್ಣನಗಳಿಗೆ ತಂಪು ಬೀರುವುದು,**
**ದೇದೀಪ್ಯಮಾನ**

# ಮೈಸೂರು ಬಲ್ಬು




**ಅದು ಭಾರತದ್ದು !**
**ಸುಲಭ ಬೆಲೆಯದು !**
**ಹೆಚ್ಚು ಬಾಳಿಕೆ ಬರುವುದು !!**

ಫೋನ್ : 2026 ಗ್ರಾಮ್ : 'Mysorlamp'

—— o ——

**ಮೈಸೂರು ಲ್ಯಾಂಪ್ ವರ್ಕ್ಸ್ ಲಿ.,**

ಮಲ್ಲೇಶ್ವರಂ - - - ಬೆಂಗಳೂರು 3

# 3–12–54ರಿಂದ ಪ್ರಾರಂಭ

ಬೆಂಗಳೂರು: ಜೈ ಹಿಂದ್-ಮಿನರ್ವ

ಮೈಸೂರು: ನ್ಯೂ ಅಪೇರಾ

ಶಿವಮೊಗ್ಗ: ಸುದರ್ಶನ

ಮಂಗಳೂರು: ನ್ಯೂ ಚಿತ್ರಾ

ಚಿತ್ರದುರ್ಗ: ರೂಪವಾಣಿ

ತುಮಕೂರು:—**ಕೃಷ್ಣಾ ಚಿತ್ರಮಂದಿರಗಳಲ್ಲಿ ದಿನ 3 ಆಟಗಳು**

ಮುಂದಿನ ಬದಲಾವಣೆ:

ದಾವಣಗೆರೆ: **ಮೋತಿ ಟಾಕೀಸ್**




ಜನವರಿ ತಿಂಗಳಲ್ಲಿ
ಪ್ರದರ್ಶನ...
ತಾರಾಗಣ
ಪಂಡರಿಬಾಯ್
ಮೈನಾವತಿ ಮತ್ತು ಇತರರು..
ಸಂತ್ ಸಖು
ನಿರ್ದೇಶನ...
ಕೃಷ್ಣನ್ ಪಂಜು
ಕನ್ನಡ...
a TALLAM Release

ಡಿಸೆಂಬರ್ ತಿಂಗಳಲ್ಲಿಯೇ ಬರುತ್ತದೆ.



ಡಿಸೆಂಬರ್ ತಿಂಗಳಲ್ಲಿ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ ನಿರೀಕ್ಷಿಸಿ.



ವಿಜಯಶ್ರೀ ಚಿತ್ರ ದವರ

# ವಿಚಿತ್ರಪ್ರಪಂಚ

(ಕನ್ನಡ)

ಸಂಭಾಷಣೆ, ಗೀತಗಳು: ಪ್ರೊ. ದ. ರಾ. ಬೆಂದ್ರೆ

ದಿಗ್ದರ್ಶನ: ಬಾಳಗಜಬರ

ಸಂಗೀತ: ಎಸ್. ಪುರುಷೋತ್ತಮ

ಅಭಿನಯ:

ಹರಿಣಿ – ಇಂದುಶೇಖರ್ – ಸುಮತಿ – ವಾಸುದೇವ್

ಈ ಚಿತ್ರವು ಕನ್ನಡ ಚಿತ್ರಪ್ರಪಂಚದಲ್ಲಿ ನೂತನ ಅಧ್ಯಾಯವನ್ನೇ ಪ್ರಾರಂಭಿಸಲಿದೆ.

A VIJAYA TALKIE RELEASE

# ಕೊರವಂಜಿ

A ANANTHIAH.

ಸಂಪುಟ ೧೩ ಡಿಸೆಂಬರ್ ೧೯೫೪ ಸಂಚಿಕೆ ೮

## ಕುಹಕಿಡಿಗಳು

ಶ್ರೀ ಪ್ರಕಾಶಂ ರವರು ಈಗ ಸದ್ಯಕ್ಕೆ ಆತ್ಮಗತಂ ಆದರಂತೆ—

* * *

ಕೇಂದ್ರ ಮಂತ್ರಿಮಂಡಳದಲ್ಲಿ ಬದಲಾವಣೆಗಳ ಪ್ರಯುಕ್ತ ಲೋಕಸಭೆಯ ಸದಸ್ಯರೆಲ್ಲಾ ಈಗ ಬಲು ಚಟುವಟಿಕೆಯಿಂದ ಕೆಲಸಮಾಡುತ್ತಿದ್ದಾರಂತೆ— ಪಂಡಿತಜೀ ಯವರ ಮನೆಯ ಹತ್ತಿರ.

* * *

ಲೋಕಸಭಾ ಸದಸ್ಯರಿಗೆ ಸೈನಿಕ ಶಿಕ್ಷಣ ಕೊಡುತ್ತಾರಂತೆ – ಇನ್ನು ಮೇಲೆ. — ಭಗವಂತಾ! ಬಾಯಿಮಾತಿನಲ್ಲೇ ಇಷ್ಟಾಗೋದು, ಕೈಗೆ ಕೋವಿ ಕೊಟ್ಟರೆ ಮುಂದೇನಪ್ಪಾ ಗತಿ!!

* * *

ಸಂತೆಬೀದಿ ಮನೇಲಿ ಮದುವೆಯಾದಾಗ, ಹೆಣ್ಣಿನವರು ಶಾಂತಿವಾತಾವರಣ ಏರ್ಪಡಿಸಲಿಲ್ಲವೆಂದು, ಮದುವೆಯಾದಮೇಲೆ, "ಅವಿಶ್ವಾಸ ಠರಾವು" ಎಂದು ಗಂಡಿನ ಕಡೆಯವರು ಗುಸುಗುಟ್ಟಿದರಂತೆ

* * *

ಆನೆದಂತದ ಸುತ್ತಿಗೆಯನ್ನು ಶ್ರೀ ರಾಧಾಕೃಷ್ಣನ್‌ರವರು ಅಮೆರಿಕಾ ಪ್ರಜಾ ಸಭೆಗೆ ಇತ್ತರಂತೆ.

—ಇನ್ನು ಯಾವುದಾದರೂ ರಾಷ್ಟ್ರದವರು ಒಂದು ಕುಡುಗೋಲನ್ನು ಅಮೆರಿಕಾ ಪ್ರಜಾಸಭೆಗೆ ಕೊಟ್ಟರೆ – ಆಗ ಡಾಲರ್ ರಾಜ್ಯಕ್ಕೂ, ಸುತ್ತಿಗೆ – ಕುಡುಗೋಲು ರಾಜ್ಯಕ್ಕೂ, ರಾಜಿಯಾದಂತೇನೇ!!

*　　　　*　　　　*

ದಿ|| ವೈಷಿನ್ಸ್ಕಿಯವರ ಮೇಲಿದ್ದ ರಷ್ಯಾದೇತರರ ಪ್ರೇಮ ವಿಶ್ವಾಸಗಳು ಈಗ ಪ್ರಕಟವಾಗುತ್ತಿದೆ.

*　　　　*　　　　*

ಚೀಣೀಯರ ಕಣ್ಣು ವಾಲಿದಂತೆಯೇ, ನಮ್ಮ ಪ್ರಧಾನ ಸಚಿವರೂ ಆಕಡೆಗೇ ಪಾಲಿದ್ದಾರಂತೆ.

*　　　　*　　　　*

ಸಂಸ್ಕೃತಿಪ್ರಸಾರ ಯಾವರೀತಿ ನಡೆಸಬೇಕು ಎಂದು ಸಂಚಾಲಕರು ಸಭೆಸೇರಿದಾಗ, ಕಚ್ಚಾಟವಾಯ್ತೆಂಬ ಸುದ್ದಿ ಶುದ್ಧ ಸುಳ್ಳಂತೆ.

*　　　　*　　　　*

ಪಾಕೀಸ್ಥಾನದಲ್ಲಿ ಇನ್ನು ಮೇಲೆ ಎರಡೇ ಸಂಸಾರಗಳಂತೆ.
—ಭಾರತ ಇನ್ನೂ ಮುಂದುವರಿದಿದೆಯಲ್ಲವೇ?

ಸಂಸ್ಥಾನಗಳೆಲ್ಲಾ ಸ್ಥಳೀಯ ವಿಷಯಗಳನ್ನು ನೋಡಿಕೊಂಡು ಕೇಂದ್ರವೇ ಎಲ್ಲಾ ಜವಾಬ್ದಾರೀ ಕಾರ್ಯವನ್ನೂ ಕೈಗೊಂಡು, ಒಂದೇ ಸಂಸಾರದಂತಿಲ್ಲವೇ?

*　　　　*　　　　*

ಪಶ್ಚಿಮ ಪಾಕಿಸ್ಥಾನ್ ಪ್ರಾಂತ್ಯವಾದಮೇಲೆ ಕಾಶ್ಮೀರಸ್ಥರು ಬಲು ಹುಷಾರಾಗಿ ಇದ್ದಾರಂತೆ.

*　　　　*　　　　*

ರಷ್ಯಾದಿಂದ ಭಾರತಕ್ಕೆ ಬಂದಿರುವ ಉಕ್ಕಿನ ಪ್ರವೀಣರು, ಕಬ್ಬಿಣದ ಪರದೆ ತಯಾರಿಕೆ ಮಾತ್ರ ಕಲಿತಿದ್ದಾರೆ ಎಂದು ಅಮೆರಿಕಾ ಪತ್ರಿಕೆಗಳಲ್ಲಿ ಇನ್ನೂ ಪ್ರಕಟವಾಗಿಲ್ಲವಂತೆ.

*　　　　*　　　　*

ಶ್ರೀ ಮೊರಾರ್ಜಿಯವರನ್ನು ಕೇಂದ್ರಕ್ಕೆ ಸೇರಿಸಿಕೊಳ್ಳಿ ಎಂದು ಶ್ರೀ ಡಾಲ್ಮಿಯಾರವರು ಒತ್ತಾಯಮಾಡುತ್ತಿದ್ದಾರೆಂಬುದು ಶುದ್ಧ ಕುಹಕ.

*　　　　*　　　　*

# ಉರಿಗಾಳು

ಸ್ತ್ರೀ ಉಪಾಧ್ಯಾಯನಿಯರು ಪಾಠ ಹೇಳುತ್ತಿರುವಾಗ, ಅದನ್ನು ಅರ್ಥಮಾಡಿ ಕೊಳ್ಳುವುದು ಪುರುಷ ವಿದ್ಯಾರ್ಥಿಗಳಿಗೆ ತುಂಬಾ ಕಷ್ಟ, ಎಂದೊಬ್ಬರು ಬರೆದಿದ್ದಾರೆ....ಅದಕ್ಕೋಸ್ಕರವೇ ಉಪಾಧ್ಯಾಯನಿಯರನ್ನು ನಿಯಮಿಸುತ್ತಿರುವುದು, ನಮ್ಮ ಕಾಲೇಜುಗಳಲ್ಲಿ.

* * *

ಸಂತಾನ ನಿರೋಧದ ಚಳುವಳಿ ಎಂದರೆ, ನನಗಾಗದು. ಎಂದೊಬ್ಬರು ಹೇಳಿಕೆ ಇತ್ತರು....ವಿಚಾರಿಸಿದರೆ, ಅವರು ಅವರ ತಂದೆತಾಯಿಂದಿರ ಒಂಬತ್ತನೆಯ ಮಗ!

* * *

ನಮ್ಮ ಮೇಲೆ ರೇಗಿ ಕೂಗಾಡುವವರೆದುರು, ನಾವೂ ರೇಗಿ ಕೂಗಾಡಬಾರದು; ತಗ್ಗು ಧ್ವನಿಯಲ್ಲೇ ಅವರನ್ನು ಮಾತನಾಡಿಸಬೇಕು : ಏಕೆಂದರೆ, ಹಾಗೆ ಮಾಡಿದರೆ, ಅವರಿಗೆ ಇನ್ನೂ ರೇಗುತ್ತೆ; ಇನ್ನೂ ಕೂಗಾಡುತ್ತಾರೆ.

* * *

ಶಾಲಾವಿದ್ಯಾರ್ಥಿಗಳ ತಂಡಗಳು ಗ್ರಾಮಗಳಿಗೆ ಹೋಗಿ ರಸ್ತೆ ನಿರ್ಮಾಣ ಕಾರ್ಯದಲ್ಲಿ ತೊಡಗಿರುವುದರಿಂದ, ಗ್ರಾಮಸ್ಥರು ವಿದ್ಯಾಭ್ಯಾಸದ ಮಹತ್ವವನ್ನು ಮನಗಾಣ ತೊಡಗಿದಾರೆ; ಹೆಚ್ಚು ಸಂಖ್ಯೆಯಲ್ಲಿ ತಮ್ಮ ಮಕ್ಕಳನ್ನು ಶಾಲೆಗಳಿಗೆ ಕಳುಹಿಸುತ್ತಿದಾರೆ.

* * *

ಹಾರುವ ತಟ್ಟೆಗಳಲ್ಲಿ ಬಂದಿಳಿಯುವ ಅಂಗಾರಕ ಗ್ರಹದ ಜನರು ತಮ್ಮನ್ನು ಅಪಹರಿಸುವುದಕ್ಕಾಗಿಯೇ ಇಳಿಯುತ್ತಿದಾರೆ, ಎಂದು ಹಲಕೆಲವು ತರುಣಿಯರು ಪೋಲೀಸ್ ಐ. ಜಿ. ಅವರಿಗೆ ದೂರಿತ್ತಿದಾರಂತೆ.

* * *

ಸಭ್ಯತೆ : ಸಭೆಗಳಲ್ಲಿ ಭಾಷಣ ಕೇಳುತ್ತ ಕುಳಿತಿರುವವರ ವಿಶೇಷರೀತಿಯ ಮರ್ಯಾದೆ: ಬಾಯಿಮುಚ್ಚಿಕೊಂಡೇ ಆಕಳಿಸುವ ಪದ್ಧತಿ.

* * *

ತಮ್ಮ ಸ್ವಂತ ಹೆಸರನ್ನು ಮರೆಮಾಚಿ, ಬೇರೆ ಹೆಸರಿನಲ್ಲಿ ಕಾದಂಬರಿಗಳನ್ನು ಬರೆಯುವವರ ಸಂಖ್ಯೆ ಈಚೆಗೆ ಹೆಚ್ಚಿದೆ....ಆದರೂ, ಜನ ಅವರನ್ನು ಪತ್ತೆಹಚ್ಚಿ, ಅಟ್ಟಿಸಿಕೊಂಡು ಹೋಗಿ ಶಪಿಸುತ್ತಿದಾರೆ.

* * *

ಸುಪ್ರಸಿದ್ಧ ಕಾದಂಬರಿಕಾರರೊಬ್ಬರಿಗೆ, ಹೊಸ ವಿಷಯದ ಕತೆಗಳು ಬೇಕಾಗಿದೆಯಂತೆ; ಕತೆಗಳನ್ನೊದಗಿಸಿದವರಿಗೆ ಅವರು ತಮಗೆ ದೊರೆಯುವ ಕೀರ್ತಿಯಲ್ಲಿ ಅರ್ಧಭಾಗವನ್ನು ಕೊಡುತ್ತಾರಂತೆ....ಹಾಗೆ ಮಾಡದಿದ್ದರೆ ಮಾತ್ರ, ಅವರಿಗೆ ಹಲವರು ಸಹಾಯಮಾಡಲು ಸಿದ್ಧ.

* * *

ಅಶ್ಲೀಲ ಕಾದಂಬರಿಗಳನ್ನೋದಿ ಓದಿ ಜನ ರೋಸಿಹೋಗಿದಾರೆ; ಇನ್ನು ಮುಂದೆ, ಅಂಥವುಗಳಿಗೆ ಗಿರಾಕಿ ಕಮ್ಮಿ....ಆದ್ದರಿಂದ, ಅಶ್ಲೀಲ ಕಾದಂಬರಿಕಾರರೆಲ್ಲರೂ, ಭಕ್ತಿರಸಪ್ರಧಾನವಾದ ಸನಾತನಧರ್ಮ ಪ್ರಚಾರಕವಾದ ಕಾದಂಬರಿಗಳನ್ನೇ ಬರೆಯುತ್ತಾರಂತೆ.

* * *

ನಮ್ಮ ಸಂಘದಲ್ಲಿ ನಡೆಯುವ ಎಲ್ಲಾ ಉಪನ್ಯಾಸಗಳಿಗೂ ಸಂಘದ ಅಧ್ಯಕ್ಷರೇ ಅಗ್ರಾಸನ ವಹಿಸಬೇಕೆಂಬ ನಿಯಮವಿದೆ; ಆದ್ದರಿಂದ, ನಮಗೆ ಅಧ್ಯಕ್ಷರು ದೊರಕುವುದೇ ಅಸಾಧ್ಯವಾಗಿದೆ, ಎಂದೊಬ್ಬರು ಬರೆಯುತ್ತಾರೆ.

* * *

ಕಾಂಗ್ರೆಸ್ ಪಕ್ಷಕ್ಕೆ ಬಹುಮತ ದೊರೆಯದ ಪಕ್ಷದಲ್ಲಿ, ಈ ಪ್ರಾಂತವನ್ನು ದೇವರೇ ಕಾಪಾಡಬೇಕು, ಎಂದು ಚುನಾವಣೆ ಪ್ರಚಾರ ಭಾಷಣದಲ್ಲಿ ಶ್ರೀ ಪ್ರಕಾಶಂರವರು ಹೇಳಿದರು....ಇದರಿಂದ, ಮುಂದಿನ ಚುನಾವಣೆಯಲ್ಲಿ ದೇವರಿಗೇ ಹೆಚ್ಚು ವೋಟುಗಳು ಸಿಗುವ ಸಂಭವ ಇದೆಯಂತೆ.

* * *

ಶ್ರೀ ವಿ. ಕೆ. ಕೃಷ್ಣಮೇನೋನ್‌ರವರಿಗೆ ಸಂಯುಕ್ತ ರಾಷ್ಟ್ರಸಂಘದಲ್ಲಿ ಶತ್ರುಗಳೇ ಇಲ್ಲವಂತೆ; ಆದರೆ, ಅವರ ಸ್ನೇಹಿತರೊಬ್ಬರಿಗೂ, ಅವರನ್ನು ಕಂಡರಾಗದಂತೆ.

* * *

# ಕೊರವಾವಲೋಕನ

"ಹಾರಾಡುವ ತಟ್ಟೆಗಳ" ಪತ್ರವನ್ನು ದೈನಂದಿನ ಪತ್ರಿಕೆಯಲ್ಲಿ ಓದುತ್ತಿದ್ದೆ, ಕ್ಲಬ್ಬಿನ ವಾಚನ ಮಂದಿರದಲ್ಲಿ. "ಸರ್ರ್" ಎಂದು ಶಬ್ದವಾಯಿತು. ತಲೆಯೆತ್ತಿದೆ. ಆ ಮಂದಿರವಲ್ಲಿ ಸೂರಿಗೆ ಎರಡಡಿಕೆಳಗೆ ಒಂದು ದೈನಂದಿನ ಪತ್ರಿಕೆ ಒಂದುಕ್ಷಣ ಹಾರಾಡಿ ನಂತರ ಮೂಲೇಲಿ ಬಿತ್ತು. ಅದು ಹಾರಿಬಂದ ದಿಕ್ಕಿಗೆ ಕಣ್ಣುನೋಟ ಹರಿಸಿದೆ. ಕೊರವ ಒಬ್ಬನೇ ಕೂತಿದ್ದಾನೆ. ಕೆಂಗಣ್ಣು, ಹುಬ್ಬೆಲ್ಲಾ ಕಂಬಳಿಹುಳು ಮುದುರಿಕೊಂಡಂತಾಗಿದೆ. ಮೂಗಿನಂಚು ಮಿನುಗುತ್ತಿದೆ. ತುಟಿಗಳು ಅದುರುತ್ತಿವೆ. ಏನುಬಂತು ಪಾಪ! ಈ ಇಳಿವಯಸ್ಸಿನಲ್ಲಿ, ಮಲೇರಿಯಾ ಗಿಲೇರಿಯಾನೋ ಅಥವಾ ಜಂಪಡ್‌ಪುರದ ಜ್ವರದ ಚಿಹ್ನೆಯೋ ಎಂದುಕೊಂಡು ಕೇಳೋಣ ಅವನನ್ನೇ ಎಂದು ಈ ತುದಿಯಿಂದ ಆ ತುದಿಯತನಕ ಹೋಗಿ ಅವನ ಹತ್ತಿರ ಕೂತು "ಯಾಕೆ ಕೊರವ ಮೈ ಚೆನ್ನಾಗಿಲ್ಲವೇ?" ಎಂದೆ.

"ಮೈ ಏನಾಗಿದೆ ನನಗೆ, ನೋಡಿದರೆ ಗೊತ್ತಾಗುಲ್ಲವೇ? ಮನಸ್ಸು ರೇಗಿದೆ. ಆ ಹಾಳು ಪತ್ರಿಕೇಲಿ ಎರಡನೆ ಪಂಚವಾರ್ಷಿಕ ಯೋಜನೆಯ ವಿವರಗಳನ್ನು ಕೊಟ್ಟಿದ್ದಾರೆ. ಅದನ್ನು ನೋಡೇ ರೇಗಿತು. ಎಸೆದೆ ಪತ್ರಿಕೇನ. ಆ ಹಾಳು ಪತ್ರಿಕೆ ಗಾಳಿಯಲ್ಲೂ ಎರಡು ನಿಮಿಷ ತೂರಾಡುತ್ತ ಇದ್ದೇ ಮೂಲೆ ಸೇರಿತು "ತನೇ ಪಂಚವಾರ್ಷಿಕ ಯೋಜನೆಯ ವಿಚಾರ ಓದುವುದಕ್ಕೆ ಮುಂಚೆ ನೋಡಿಯೇ ರೇಗಿದೆಯಲ್ಲಾ! ವರಮಾನ ತೆರಿಗೆಯಧಿಕಾರಿಯ ಹಾಗೆ! ಇದು ನ್ಯಾಯವೇ?" ಎಂದು ಮೃದುವಾಗಿ ಹೇಳಿದೆ, ದೈನ್ಯದಿಂದ ಹೇಳಿದೆ. ದೇಶಪ್ರೇಮವನ್ನು ಮುಖದಲ್ಲಿ ಸೂಸುತ್ತಾ ಹೇಳಿದೆ.

ಕೊರವ ನನ್ನ ನೋಡಿದ. ದೃಷ್ಟಿಸಿ ನೋಡಿದ. ಹುಬ್ಬು ಸಡಿಲಿತು ಮಲಗಿದ ಕಂಬಳಿ ಹುಳುವಿನಂತಾಯ್ತು. ಮೂಗಂಚು ಮಂಕಾಯ್ತು. ತುಟಿಗಳು ಸ್ಥಿಮಿತವಾದುವು ಮಿದುವಾಗಿ ಹೇಳತೊಡಗಿದ.

"ಅಲ್ಲಾ ಮಗೂ! ನಿನಗೆ ಬಂದ ಅನುಮಾನ ಸಹಜವಾದುದ್ದೇ! ಆದರೆ ಎರಡನೇ ಪಂಚವಾರ್ಷಿಕ ಯೋಜನೆಯನ್ನು ನಮ್ಮ ಮನೆಯಲ್ಲಿ ನಮ್ಮಾಕೆ ಅಡಿಗೆಗೆ ಅನ್ವಯಿಸಿದ್ದಾಳೆ. ಅಡಿಗೆ ಯಥಾಪ್ರಕಾರ ಆಗಬೇಕು. ಊಟ ಆಗಬೇಕು. ಮಿಕ್ಕಿದ ಅಡಿಗೆಯಲ್ಲಿ ದೀನದುರ್ಬಲರಿಗೆ ಸಾಕಷ್ಟು ಧರ್ಮವೂ ಆಗಬೇಕು. ಈ ರೀತಿ ಯೋಜನೆ ಹಾಕಿದಂತೆ ಕಾಣುತ್ತೆ.

ಅವರೇಕಾಯಿ. ಗೊತ್ತಲ್ಲಾ! ಹಿಟ್ಟು ಮೇಲೆ ಅವರೆಕಾಳು ಅಂತ ಕೇಳಿಲ್ಲವೇ. ತಿಂದರೆ ಸಾಕು ಸುಷುಪ್ತಾವಸ್ಥೆ ಹಿಂದೇನೇ! ಅದೊಂದು ತರಕಾರಿನೋಡು ಯಾರು ಅಡಿಗೆ ಮಾಡಲಿ, ಅದನ್ನು ಕೆಡಿಸೋದು ಕಷ್ಟ!

ಈ ದಿನ ಅವರೆಕಾಯಿ ಸಾರುಮಾಡಿದ್ದಳು, ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ, ಕೂಟಿನ ಬಣ್ಣ, ವೆ ಣಸಿನ ಕಷಾಯದ ರುಚಿ. ಕೆಸರಿನಂತೆ ಗಟ್ಟಿ. ತೇಲಾಡುತ್ತಿದ್ದ ಅವರೇಕಾಯಿ. ಪ್ರೇತಗಳಂತೇ ಕಾಣಿಸಿದುವು. ಹಸಿದ ಹಾರವ ಸರ್ವಭಕ್ಷಕ ಅಲ್ಲವೇ ನೋಡುಕ್ಕೆ ಹೇಗಿದ್ದರೂ ಅಡಿಗೆಮಾಡಿದವರಂತೆಯೇ ಬಾಯಿಗೆ ಹಿತವಾಗಿರಬಹುದು ಅಂದುಕೊಂಡು ಬಾಯಿಗಿಟ್ಟುಕೊಂಡೆ. ಪ್ರೇತದ ರುಚಿಯೇ!

"ಏನೇ" ಎಂದೆ, ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಸಾರ ಆಳಿಯದಂತೆ ಪುಷ್ಟಾಂಗಳು ಸಾಂಗವಾಗಿರುವಂತೆ ಅವರೇಕಾಯಿ ಸಾರು ಮಾಡಿಳಿಸಿ ದ್ದೇನೆ ಎಂದಳಾಕೆ, ಜಂಭದಿಂದ. ಆ ಮಾತಿನ ಹೆಮ್ಮೆಗೆ ತಲೆದೂಗುವಂತೆ, ಲಕ್ಷ್ಮಿ ಪಟಕ್ಕೆ ಸಿಕ್ಕಿಸಿದ್ದ ನವಿಲುಗರಿ ಕುಣಿಯಿತು.

ನನ್ನ ಹೊಟ್ಟೆಗೆ ಯಾರೋ ಬೆಂಕಿ ಹಾಕಿದಂತಾಯ್ತು. ಅಲ್ಲಾ! ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ, ಈ ರೀತಿಯ ಸೂತಕಗಳು ಇನ್ನೈದು ವರ್ಷ ಕಾದಿದೆಯಲ್ಲಾ ನನಗೆ! ಅವರೆಕಾಯಿ ರುಚಿಯನ್ನು ಕೆಡಿಸಬಲ್ಲ ಈ ಯೋಜನೆ ದಿಟವಾಗಲೂ ರಾಕ್ಷಸ ನಿರ್ಮಾಣವೇ ಎಂದು ಧೃಡವಾಯಿತು ನನಗೆ.

ಅದಕ್ಕೇ ಆ ಪತ್ರಿಕೆಯಲ್ಲಿ ಅದರ ಸುದ್ದಿಯನ್ನು ಹಿರಿಸಾಲಿನಲ್ಲಿ ಕಂಡಾಗಲೇ ರೇಗಿ ಎಸೆದೆ ಎಂದ.

—ಸ್ವಂತ ಅನುಭವವು ಪ್ರಕಟವಾದ ಸುದ್ದಿಗಿಂತ ಸತ್ಯವಾಗಿರಬಹುದೇನೋ ಎಂದನ್ನಿಸಿತು ನನಗೆ.

* * *

ತುಂತುರುಮಳೆ ಬಿದ್ದ ಸಂಜೆ ಜೋಡಿ ಕಾಮನಬಿಲ್ಲು ಆಕಾಶದಲ್ಲಿ ಬಿದ್ದಿತ್ತು ನೋಡಿ, ಆ ಸಂಜೆ ಕೊರವ ನಾನೂ ಇಬ್ಬರೂ ಕ್ಲಬ್ಬಿನಿಂದ ಹಾಗೇ ಆಡ್ಡಾಡಿ ಹೋಗೋಣ ಎಂದು ಹೊರಟಿದ್ದೆವು. ಕ್ಲಬ್ಬಿನ ನೈರುತ್ಯದ ಕಾಲುಹಾದಿಯಲ್ಲಿ ಕಾಲು ಗಂಟೆ ನಡೆದರೆ, ಕೊರಚರಪಾಳ್ಯ ಸಿಗುತ್ತದೆ. ಅಲ್ಲಿ ರಸ್ತೆಗಳಿಲ್ಲ, ನಡೆದಲ್ಲಿಯೇ ಹಾದಿ. ಅಲ್ಲಿ ಗುಡಿಸಲುಗಳಿಲ್ಲ ಇದ್ದೆಡೆಯೇ ಡೇರೆಹಾಕಿ ಮಲಗುತ್ತಾರೆ. ಅಲ್ಲಿನ ನಿವಾಸಿಗಳಲ್ಲಿ ಸಮಾನತೆ ಎದ್ದು ಕುಣಿಯುತ್ತದೆ. ಇವನು ಮಲಗುವ ಜಾಗದಲ್ಲಿ ಎಷ್ಟು ಸೊಳ್ಳೆ ಚೇಳು ಜಿರಳೆ ಇಲಿ ಹೆಗ್ಗಣಗಳು ಇವೆಯೋ ಅಷ್ಟೇ ಇನ್ನೊಬ್ಬನು ಮಲಗುವಲ್ಲೂ ಇರುತ್ತದೆ. ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನ ಎಂದು ಭಗವ

ಭಕ್ತರು ಹೇಳುತ್ತಾರಲ್ಲವೇ? ಈ ಪಾಳ್ಯದಮೇಲೆ ದೇವರ ದೃಷ್ಟಿ ತುಂಬಾ ಬಿದ್ದಿದೆ. ಒಬ್ಬೊಬ್ಬ ಪಾಳ್ಯಗಸಿಗೂ ಇಜ್ಜೋಡಿ ಹೆಂಡಿತಿ. ಅದಕ್ಕೇ ಆಕಾಶದಲ್ಲೂ ನಾವು ಕಂಡಿದ್ದು ಇಜ್ಜೋಡಿ ಕಾವ ನಬಿಲ್ಲು

ಆ ಹೊತ್ತಿನಲ್ಲಿ ರಸ್ತೆಯಾಗಿರಬಹುದಾದಕಡೆ ಗಲಾಟೆ ಆಗುತ್ತಿತ್ತು "ಏನು ಆಗಿರಬಹುದು?" ಎಂದು ನಾವಿಬ್ಬರೂ ಅತ್ತ ಹೋದೆವು.

ಆ ಮುಳ್ಳು ಹಾದಿಯಲ್ಲಿ ಹಣವಂತ ಕಂತ್ರಾಕ್ಟರೊಬ್ಬ ಹೋಗುತ್ತಿದ್ದನಂತೆ. ಹಠಾತ್ತಾಗಿ ನಾಲ್ಕಾರುಜನ ಅವನ ಮೈಮೇಲೆ ಬಿದ್ದು ಅವನ ಬಾಯಿಗೆ ಅವನ ಟೋಪಿಯನ್ನೇ ತುರುಕಿ, ಜೇಬಿನಲ್ಲಿದ್ದುದೆಲ್ಲವನ್ನೂ ದೋಚಿಕೊಂಡು ನಾಪತ್ತೆಯಾದರಂತೆ ಬಳಿಕ ಟೋಪಿ ಉಗುಳಿ ಅವನು ಬೋಲ ಬೋಲ ಮಾಡಿದಾಗ ಎಲ್ಲರೂ ಗುಂಪು ಕಟ್ಟಿಕೊಂಡಿದ್ದರಂತೆ. ನಾವು ಹೋದಾಗ ಆಗ "ಅಯ್ಯೋ! ಇಂಜಿನಿಯರ್ ಮನೆಗೆ ಹೋಗ್ತಾ ಇದ್ದೆ ಈ ದರೋಡೆಗಾರರು ಮೇಲೆಬಿದ್ದು ಜೇಬಿನಲ್ಲಿದ್ದ ಮುನ್ನೂರು ರೂಪಾಯಿ, ರಿಪೇರಿಯಾಗಿದ್ದ ಇಂಜಿನಿಯರ್ ಗಡಿಯಾರ, ನನ್ನ ಹೆಂಡತಿಗೆ ಎಂದು ಕೊಂಡಿದ್ದ ಒಂದು ಮಲ್ಲಿಗೆ ಮೊಗ್ಗಿನ ಜಡೆಬಿಲ್ಲೆ ಎಲ್ಲಾ ಕೊಂಡುಹೋದರೋ" ಎಂದು ಅಳುತ್ತಿದ್ದ.

ನಾವಿಬ್ಬರೇ ಮೈತುಂಬಾ ಉಡುಪು ಧರಿಸಿದ್ದವರು ಅಲ್ಲಿ! ಪೋಲಿಸ್‌ನವನು ಈಶಾನ್ಯಮೂಲೆಯಿಂದ ಬರುತ್ತಿದ್ದ, ಮೆರವಣಿಗೆಯ ನಡೆಯಲ್ಲಿ! ನಮ್ಮನ್ನು ಕಂಡು ಭಯಪಟ್ಟಾದರೂ ಆತ ಈ ದರೋಡೆಯನ್ನು ತನಿಖೆಮಾಡಲಿ ಎಂದು ನಾನು ಅಲ್ಲೇ ನಿಂತೆ. ಕೂರವ ಜಗ್ಗಿ ನನ್ನ ಕೈಹಿಡಿದು ಎಳೆದು ದರದರ ಎದುರು ದಿಕ್ಕಿಗೆ ಸೆಳೆದೊಯ್ದ. ಸುಮಾರು ಫರ್ಲಾಂಗ್ ದಾಟುವತನಕ ನಾನು ಹೇಳುತ್ತಲೇ ಇದ್ದೆ. "ಇಲ್ಲೇ ಇದ್ದು ಪೋಲಿಸಿನವನಮೇಲೆ ನಮ್ಮ ಪ್ರಭಾವ ಬೀರಿ ದರೋಡೆಕಾರರನ್ನು ಹಿಡಿಯುವುದಕ್ಕೆ ಏರ್ಪಾಟು ಮಾಡೋಣ" ಎಂದು.

ಅವ ಮಾರುತ್ತರ ಕೊಟ್ಟಿದ್ದು, ಜನನಿಬಿಡ ಹಾದಿಗೆ ಬಂದನಂತರವೇ!

"ಆ ಗೋಳೆಲ್ಲಾ ನಮಗೆ ಯಾಕೋ? ಕಳಕೊಂಡವನ ಹಣ ವಸ್ತುಗಳು ಎಂದಿದ್ದರೂ ಕಳಕೊಂಡವನಿಗೆ ಸೇರುತ್ತಿದ್ದಿಲ್ಲ ಅವನು ಹೋಗುವಕಡೆ ಖಾಲಿಯಾಗುತ್ತಿದ್ದುವು. ಅಂದಮೇಲೆ ಯಾರು ದರೋಡೆ ಮಾಡಿದರೇನೋ! ಯಾರಿಗೆ ಸಿಕ್ಕಿದರೆ, ಯಾರಿಗೆ ದಕ್ಕಿದರೆ ಏನುವ್ಯತ್ಯಾಸ ಬಾ! ಬಾ! ದೇವರು ನ್ಯಾಯ ಸಲ್ಲಿಸುತ್ತಿರುವಾಗ ಪಾಮರರಾದ ನಾವು ಮಧ್ಯೆ ಒರಬಾರದು ಇಷ್ಟೂ ದೈವಭಕ್ತಿ ಇಲ್ಲವೇ ನಿನಗೆ" ಎಂದೆಲ್ಲಾ ವೇದಾಂತ ಉಸುರಿದ. ಅಂದರೆ ಮೇಲುಸುರಿದ.

ಧಡಿಯ ಹೇಳಿದ್ದರಲ್ಲಿ ದಿಟವೂ ಇರಬಹುದು ಎಂದು ನನಗೂ ಅನ್ನಿಸಿತಾದ್ದರಿಂದ ಅವನ ಹೇಳಿಕೆಗೆ ಓ ಕೊಟ್ಟು ತಿರುಗಿ ಕ್ಲಬ್ಬಿನ ದಾರಿ ಹಿಡಿದೆವು.

* * *

# ಕಾಲೇಜು ಡೇ — ಓಲ್ಡ್ ಬಾಯ್ ಗಳು

ಕೇವಲ ಕರ್ತವ್ಯ ದೃಷ್ಟಿಯಿಂದಲ್ಲ, ನಮ್ಮೂರಲ್ಲಿ ಕಾಲೇಜು ಡೇ ಗೆ ಹಣವಸೂಲು ಮಾಡುವ ಏಜಂಟ್ ಮಹಾಶಯನ ಬಲವಂತಕ್ಕೆ ನಾನೂ ತೆತ್ತೆ, ಮೂರುರೂಪಾಯಿ. ತೆತ್ತತಪ್ಪಿಗೆ, ಕಾಲೇಜು ಡೇ ಗೂ ಹೋದೆ.

ಹೋಗಬಾರದಾಗಿತ್ತು. ಚಪ್ಪರದೊಳಗೆ ಕಾಲಿಡುತ್ತಲೂ, ಒಬ್ಬ ಹಲ್ಲುಕಿರಿಯುತ್ತ ನನ್ನೆದುರಿಗೆ ಬಂದು ನಿಂತ. 'ಓಹೊಹೊ!' ಅಂದ. 'ನನ್ನನ್ನ ಗುರುತು ಹಿಡಿಯಲಿಲ್ಲವೆ?', ಅಂದ. 'ನನ್ನ ಹೆಸರೇನು, ಹೇಳಿ.. ನಾನು ನಿಮ್ಮ ಕ್ಲಾಸ್ ಮೇಟು, ಕಾಲೇಜಲ್ಲಿ!' ಅಂದ, ಹಲ್ಲುಕಿರಿಯುತ್ತ, ಅಂದರೆ, ೧೫೦ರೂಪಾಯಿನ ಹೊಸಹಲ್ಲು ಬೆಳಗಿಸುತ್ತ.

"ಇದೆಂಥ ಹಿಂಸೆ! ಈ ಗೃಧ್ರನ ಹೆಸರನ್ನ ನಾನೇನುಬಲ್ಲೆ?", ಎಂದು ನಾನು ಹೆಕ್ಕತ್ತು ಕೆರೆಯುತ್ತ, ಸುಮ್ಮನೆ ನಿಂತಿದ್ದೆ.

"ನಿಮ್ಮ ಹೆಸರು ರಂಗ, ಅಲ್ಲವೆ? ಕೋಳೀಕೆ ರಂಗ?", ಎಂದ. ಹೌದು! ಹಾಳಾದವರು ಹಾಸ್ಟಲ್ ಹುಡುಗರು ನನಗೆ ಆ ಬಿರುದನ್ನು ಅಂಟಿಸಿಬಿಟ್ಟಿದ್ದರು. "ಹುಂ", ಎಂದು ತಲೆ ಆಡಿಸದೆ ವಿಧಿ ಇರಲಿಲ್ಲ. ಆ ದಿನ ಅಲ್ಲಿ ನೆರೆದಿದ್ದ ರಾವ್ ಸಾಹೇಬರುಗಳೂ, ಪಿ.ಸಿ.ಎಸ್‌ನವರೂ, ರಾಜ ರಾಜ್ಯ ಸೇವಾಧುರೀಣರೂ, ಇತರ ಉನ್ನತಾಧಿಕಾರಿಗಳೂ, ತಮ ತಮಗೆ 'ಕುರಿ' 'ತೋಳ' 'ನರಿ' 'ಹುಲಿ' 'ಬೋಳ' 'ಎಮ್‌ಡನ್' 'ಕೈಸರ್' 'ಗುಲ್ಷನ್' ಇತ್ಯಾದಿ ಪರಿಚಿತರಾಗಿದ್ದರೇ ಹೊರತು, ಬೇರೆ ಬೇರೆ ಹೆಸರಿಂದಲ್ಲವೆಂಬ ಘೋರ ಸತ್ಯ ನನಗೆ ಆಗ ವೇದ್ಯವಾಯಿತು. 'ನನ್ನ ಗುರುತು ಸಿಗಲಿಲ್ಲವೆ? ನಾನೇ 'ಒಬ್ಬಟ್ಟು!'....ಇವತ್ತಿನ ಅಧ್ಯಕ್ಷ ಹುಣಿಸೆ ಗೊಜ್ಜು ಇದಾನಲ್ಲಾ, ಇವನ ಜುಟ್ಟಿಗೆ ಹಗ್ಗಕಟ್ಟಿ ಮಂಚದ ಕಾಲಿಗೆ ಕಟ್ಟಿರಲಿಲ್ಲವೆ, ನಾವಿಬ್ಬರೂ....ದೀಪಾವಳಿ ಹಿಂದಿನದಿನ ಕೆಮಿಸ್ಟ್ರಿ ಪ್ರೊಫೆಸರ್ ಜೋಬೊಳಗೆ ಚಿನಕುರಳಿ ಗೀಚಿ ತುಂಬಲಿಲ್ಲವೆ, ನಾವಿಬ್ಬರೂ .... ಒಬ್ಬಟ್ಟನ್ನ ಮರೆತುಬಿಟ್ಟೆಯೇನೋ, ಕೋಳೀಕೆ?", ಎಂದು, ಆತ, ನನ್ನ ಬೆನ್ನಮೇಲೆ ಬಲವಾಗಿ ಗುದ್ದಿದ. ನನ್ನಹಾಗೆ ಆತನಿಗೂ ವಯಸ್ಸು ೫೮. ಆದರೂ, ಹಾಳು, ಅವನ ಮುಷ್ಟಿ, ಉಕ್ಕು! ನನ್ನ ಬೆನ್ನು,... ಮುಕ್ಕು.

ಹೇಗೋ ನಮ್ಮ ಹಿಂದಿನ ಕೊಳೆಯನ್ನೆಲ್ಲ ಮುಚ್ಚಿ, ಗೋಮುಖ ಹೊತ್ತು, ಗಂಭೀರವಾಗಿ ನಾವು ಗಣ್ಯಸ್ಥಾನ ಪಡೆದು ಮೆರೆಯುತ್ತಿದ್ದರೆ, ಈ ಕಾಲೇಜು ಡೇ ಗೆ ಸೇರುವ ನಮ್ಮ ಆಗಿನ ಗೆಳೆಯರು ನಮ್ಮ ಮುಖವಾಡಗಳನ್ನು ಕಿತ್ತು ಎಸೆದು, ನಮ್ಮ ಕಣ್ಣೆದುರಿಗೆ, ನಾವು ಕಾಣಬಾರದೆಂದಿದ್ದದ್ದನ್ನೆಲ್ಲಿ, ಹಿಡಿಯುತ್ತಾರೆ. ಇದೊಂದು ದುರಂತವೇ ಸರಿ!

"ಏನಯ್ಯ, ಕೋಳಿಕೆ? ಇಷ್ಟು ಧಡಿಯ ಆಗಿಬಿಟ್ಟಿದೀಯಾ? ನಿನ್ನ ಸೊಟ್ಟಕೈ ಸರಿಹೋಯಿತೊ? ಕಾಲೇಜಲ್ಲಿ ಹಾಕಿ ಆಡುತ್ತಿದ್ದಾಗ ನಿನ್ನ ಸೊಂಟ ಮುರಿಯಿತಲ್ಲಾ, ಅಲ್ಲ, ಮುರಿದನಲ್ಲಾ, ಆ ಬೆಲ್ಲದಚ್ಚು, ಈಗಲೂ ನೀನು ಆ ಮುರಿದ ಸೊಂಟದ ಬಲದಿಂದ ತಾನೆ, ಭಾರಿ ದೊಡ್ಡಮನುಷ್ಯನಾಗಿರೋದು?" ಎಂದು ಅವನು ನನ್ನನ್ನು ಕೇಳಿಬಿಡೋದೆ?

ನಾನೂ ಸುಮ್ಮನಿರಲಿಲ್ಲ ಒಬ್ಬಟ್ಟು ಎಂಬ ಅಡ್ಡಹೆಸರು ಅವನಿಗೆ ದೊರೆತದ್ದು ೨೪ ಒಬ್ಬಟ್ಟುಗಳ ರಿಕಾರ್ಡನ್ನು ಹಾಸ್ಟಲಲ್ಲಿ ಏರಿಸಿ ಹಾರಿಸಿ ಮೆರೆಯಿಸಿದ್ದರಿಂದ. "ನೀನು, ಅದೇ ಜಾಣತನದಿಂದ ತಾನೆ ಈಗಲೂ! ಡಿವೈಡಿಂಗ್ ಸಿಸ್ಟಂನಲ್ಲಿ, ಕಂಡವರ ಖರ್ಚಿನಲ್ಲಿ ಒಬ್ಬಟ್ಟು ಹೊಡೀತಿದ್ದೆಯಲ್ಲಾ, ಈಗಲೂ, ಅದೇತಾನೆ, ಉಪಾಯ? ಎಡಗೈ ಸಂಪಾದನೆಯಲ್ಲಿ ಎಷ್ಟು ಬಂಗಲಿ ಕಟ್ಟಿದೆಯೊ?" ಎಂದು ನಾನೂ ಬಿಟ್ಟೆ ಬಾಣಗಳನ್ನ.

ಕಾಲೇಜು ಡೇ ಸಮಾರಂಭದಲ್ಲಿ, ಪರಸ್ಪರ ಸಂಭಾಷಣೆಯ ವರಿಸೆ, ಇದು. "ನನ್ನ ಉತ್ತರ ಪತ್ರಿಕೆ ಕಾಪಿಹೊಡೆದಲ್ಲವೇನೋ ನೀನು ಪಾಸುಮಾಡಿದ್ದು?", "ನೀನು ನಿನ್ನ ಡಿಕ್ಷನರಿಯೊಳಗೆ ಒಂದು ಹುಡುಗಿಯ ಫೋಟೋನ ಸೇರಿಸಿದ್ದೆಯಲ್ಲಾ, ಅದನ್ನೇ ಮದುವೆಯಾದೆಯೇನು?" "ನಿನಗೂ ಮಕ್ಕಳಾದುವೇನು?". "ಕಾಲೇಜು ಪ್ರೊಫೆಸರಾಗಿ, ನಮಗೆ ನಮ್ಮ ಪ್ರೊಫೆಸರುಗಳು ಮಾಡಿದ್ದನ್ನೆಲ್ಲ ತಿರುಗಿಸಿ ಹುಡುಗರ ಮೇಲೆ ಪ್ರಯೋಗಮಾಡುತ್ತೇನೆ ಅಂತ ಶಪಥಮಾಡಿದ್ದೆಯಲ್ಲಾ, ಏನಾಯಿತು?", ಎಂದು ಈ ಪರಿಯ ಪ್ರಶ್ನೆಗಳನ್ನು ಮುದುಕರು ಒಬ್ಬರಿಗೊಬ್ಬರು ಕೇಳುತ್ತಿರುತ್ತಾರೆ.

ಇನ್ನು ಕೆಲವರು ವೃದ್ಧರಿರುತ್ತಾರೆ. ರಿಟೈರಾಗಿ ಎಂಟುವರ್ಷವಾದರೂ, ಪೆನ್‌ಷನ್ ಸ್ಯಾಂಕ್ಷನಾಗದೆ, ಕಾಸಿಲ್ಲವಲ್ಲಾ ಎಂದು ಖಾಯಿಲೆಯೂ ಬೀಳದೆ, ಅರೆ ಜೀವ ಹಿಡಿದು, ಓಡಾಡುತ್ತಿರುತ್ತಾರೆ ಅವರೂ, ಓಲ್ಡ್‌ಬಾಯ್ಸುತಾನೆ? ಅವರು ಇಂಥ ಸಮಾರಂಭಗಳಿಗೆ ಬರುವುದು, ತಾವು ಕಾಲೇಜಿನಲ್ಲಿ ಓದುತ್ತಿದ್ದಾಗ, ತಮ್ಮ ಸ್ನೇಹಿತರಿಗೆ ಕೊಟ್ಟಿದ್ದ ಒಂದುರೂಪಾಯಿ, ಎಂಟಾಣೆ ಇತ್ಯಾದಿ ಪುಡಿಸಾಲ, ಹಿಂದಕ್ಕೆ ಪಡೆಯುವುದಕ್ಕಾಗಿಯೇ.

ಗುಂಪು ಗುಂಪಾಗಿ, ಅಲ್ಲಲ್ಲಿ ನಿಂತು ಮಾತಾಡುತ್ತಿರುವ ಓಲ್ಡ್ ಬಾಯ್ಸನ್ನು ಯಾರಾದರೂ ನೋಡಿದರೆ, "ಆಹಾ! ಎಂಥ ವಿದ್ವನ್ಮಂಡಲಿ! ಇವರು ಈಗ ಇಷ್ಟು ಬಿರುಸಾಗಿ ವಿಚಾರ ವಿನಿಮಯಮಾಡುತ್ತಿರುವುದು ಯಾವ ಮಹದ್ವಿಷಯಗಳನ್ನು ಕುರಿತು, ಇರಬಹುದು? ಜಗತ್‌ಶಾಂತಿಯೆ? ಎರಡನೆಯ ಪಂಚವಾರ್ಷಿಕ ಯೋಜನೆಯೆ? ಸಂತಾನ ನಿರೋಧವೆ? ವಿದ್ಯಾ ಸುಧಾರಣೆಯೆ? ವಿಧಾನಸೌಧವೆ? ಹೊನ್ನೆ ಮರಡೆ? ಮತ್ಸ್ಯವ್ಯವಸಾಯವೆ? ಕೊರಿಯದ ಐಕ್ಯತೆಯೆ? ಗೋವಾವಿಮೋಚನೆಯೆ?" ಎಂದು ಬೆಚ್ಚಬೆರಗಾಗಬಹುದು.

ಆದರೆ, ನಿಜಕ್ಕೂ ಅವರ ನಡುವೆ ಹೋಗಿ ಆಲಿಸಿದರೆ ತಿಳಿಯುವುದು, ಓಲ್ಡ್ ಬಾಯ್ಸಿಗೆ ಮುಖ್ಯವೆನಿಸುವುದು ಅದೊಂದೂ ಅಲ್ಲ. ಆ ಗುಂಪುಗಳಲ್ಲಿ ಆ ಜನ ಅಷ್ಟು ಬಿಸಿಬಿಸಿ ಚರ್ಚಿಸುವುದು: ಕೆಳಹೊಟ್ಟೆನೋವು, ಅಳಿಯಂದಿರಿಗೆ ನೌಕರಿ, ಚಕ್ರಬಂಧ ಸ್ಪರ್ಧೆ, ಹಿಂದಿನಸಾಲ, ಹಸ್ತಸಾಮುದ್ರಿಕ, ಇಕಾಸಾ ಗುಳಿಗೆ, ಗಂಗಾಸ್ನಾನ, ಕಾಳಮೇಘಾನಂದಜಿಯವರ ತಾಯಿತ,....ಮೊಮ್ಮಗನಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ದೊರೆಯದ ದಾರುಣ ಪರಿಸ್ಥಿತಿ, ಕಲಿಮಹಿಮೆ, ಶನಿಮಹಾತ್ಮೆ.... ಇತ್ಯಾದಿ ವಿಷಯಗಳೆ!

—ರೇವಣ್ಣ.

---

ರಾತ್ರಿ ಹಗಲು, ನನ್ನ ತೊಗಲ
ಕೆಳಗೆ ತುಮುಲ, ತಳಮಳ!
ಕೆರೆತ! ... ಕರಕರ! ಕಜ್ಜಿ

ರಾತ್ರಿ ಹಗಲು, ನನ್ನ ಬುರುಡೆ
ಒಳಗೆ ತುಮುಲ, ತಳಮಳ!
ಒಪ್ಪೊ ತಪ್ಪೊ! ಕರಕರ!

ರಾತ್ರಿ ಹಗಲು ನನ್ನ ಮನದ
ಬುಡದಿ ತುಮುಲ, ತಳಮಳ!
ದ್ವೇಷ, ದ್ವೇಷ! ಕರಕರ!

ರಾತ್ರಿ ಹಗಲು, ನನ್ನ ನಾನೇ
ಬಿಡದೆ ಕಿತ್ತು ತಿನ್ನುವೆ!
ಶಾಂತಿ ಎಂದೂ ಸೊನ್ನೆಯೆ;

---

# ಓವರ್‌ಲೋಡ್

ಬಸ್ ಡ್ರೈವರುಗಳನ್ನೂ ಕಂಡಕ್ಟರುಗಳನ್ನೂ ಬೈದೇನು ಪ್ರಯೋಜನ? ಸರ್ಕಾರದ ಅಧಿಕಾರಿಗಳೂ, ಬಸ್ಸನ್ನು ತಯಾರಿಸುವ ಕಂಪೆನಿಯವರೂ, ಇಷ್ಟೇ ಜನ ಕೂರಬಹುದು, ಇಷ್ಟೆ ತೂಕ ಹೊರಬಲ್ಲುದು, ಎಂದು ನಿರ್ಧರಿಸುತ್ತಾರೆ ಸರಿ! ಆದರೂ ಅದಷ್ಟು ಭರ್ತಿಯಾದಮೇಲೆ, ಖಾಲಿಜಾಗ ಇರುತ್ತದಲ್ಲಾ, ಬಸ್ಸುಗಳಲ್ಲಿ? ಖಾಲಿ ಜಾಗವನ್ನು ಖಾಲಿಯಾಗಿಯೇ ಬಿಟ್ಟುಕೊಂಡು ಹೇಗೆ ಹೊರಡುವುದು? ಡ್ರೈವರಿನ ಬಲಗಡೆ, ಇಬ್ಬರು ಕೂಡುವಷ್ಟು ಖಾಲಿ, ಎಡಗಡೆ ನಾಲ್ಕುಜನ ಕೂಡುವಷ್ಟು ಜಾಗ ದಲ್ಲಿ, ಇಬ್ಬರೇ ಇಬ್ಬರಿಗೆ ಅವಕಾಶ ಎಂಬ ನಿರ್ಬಂಧ.. ಯಾವ ಸೀಮೆ ನ್ಯಾಯ ಇದು? ಆಮೇಲೆ, ಎರಡುಕಡೆ ಬೆಂಚುಗಳ ಮಧ್ಯೆ, ಉದ್ದಕ್ಕೂ, ಆ ಓಣಿ? ಇನ್ನು, ಹಿಂದುಗಡೆ, ಬಟ್ಟಬಯಲಿನಂತೆ ಬಾಯಿ ತೆರೆದು ಮಲಗಿರುವ ಆ ತೊಟ್ಟಿ? ಅಲ್ಲಿ, ೧೫ಮೂಟೆ ಜೋಳ ಸುಖವಾಗಿ ಜೋಡಿಸಬಹುದು; ೩೦ಜನ ಹಳ್ಳಿಯವರನ್ನು ತುಕ್ಕರಿಸಬಹುದು ೨೦ಕುರಿಗಳನ್ನು ನಿಲ್ಲಿಸಬಹುದು. ಮುಂದಿನ ಎರಡು ಚಕ್ರಗಳ ಮೇಲೂ ಅಗಲವಾದ ಆ ಮಂದಾಸನಗಳು? ಪೃಷ್ಠದಲ್ಲಿ ಬಿಗಿಸಿರುವ ಏಣಿ? ಅದರ ಮೆಟ್ಟಲುಗಳಮೇಲೆ ನಾಲ್ಕು ಜನರಾದರೂ ನಿಲ್ಲಕೂಡದೆ? ಇನ್ನು, ಮೇಲು ಛಾವಣಿ? ಕೋಳಿ ಗೂಡೆಗಳಾಗಲಿ, ಮೀನಿನ ಚೀಲಗಳಾಗಲಿ, ಮೆಣಸಿನಕಾಯಿ ಮೂಟೆಗಳಾ ಗಲಿ, ಸಿಗದೆ ಇದ್ದರೆ, ಅಲ್ಲೂ, ೧೫ಜನ ಮಲಗಬಹುದು, ೩೦ಜನ ತೆವಳಬಹುದು ಇದಿಷ್ಟೂ ಖಾಲಿಜಾಗಗಳನ್ನು ಭರ್ತಿಮಾಡದೆ ಇದ್ದರೆ, .... "ಪೂರ್ಣಸ್ಯ ಪೂರ್ಣ ಮಾದಾಯ ಪೂರ್ಣಮೇವಾ ಶಿಶ್ಯತೆ", ಎಂಬ ಮಾತು, ಉಪನಿಷತ್ತಿನಲ್ಲಿ ಏಕೆ ಉಕ್ತವಾಗಿದೆ? ಭರ್ತಿ ಬಸ್ಸಿಗೆ, ಇನ್ನೂ ಭರ್ತಿ ತುಂಬಿದರೆ, ಮತ್ತೂ ಭರ್ತಿಯಲ್ಲದೆ, ಡಬ್ಬಲ್ ಭರ್ತಿಯುಂಟೆ?, ಎಂದು ಆ ಋಷಿಗಳೇ ಕೇಳಿದಾರೆ, ಇಲ್ಲ, ಎಂಬುದೇ ಅವರಿಗೆ ಡ್ರೈವರುಗಳೂ ಕಂಡಕ್ಟರುಗಳೂ ಕೊಡುವ ಉತ್ತರ.

ಒಂದೇ ಲೈನಿನ ಮೇಲೆ ದಿನವೂ ಓಡಾಡುವ ಡ್ರೈವರಿಗೂ ಕಂಡಕ್ಟರಿಗೂ ಗೊತ್ತು, ಆ ಲೈನಿನ ಅಕ್ಕಪಕ್ಕದವರ ಆತುರ. ನಂಜೇಗೌಡರಿಗೆ ಕೋರ್ಟು, ಸಾಹುಕಾರ್ ಚಿನ್ನಯ್ಯನವರಿಗೆ ಸಂತೆ, ಮೇಷ್ಟರು ರಾಮಯ್ಯನವರಿಗೆ ರಜಾ ಅರ್ಜಿ ಕೊಡಲು ಇನ್‌ಸ್ಪೆಕ್ಟರ್ ಸಾಹೇಬರನ್ನು ನೋಡುವ ಅವಸರ, ಶಿಂಗಮ್ಮನವರಿಗೆ ಹೆರಿಗೆ ಅವಸರ, ಇವೆಲ್ಲ ಇಷ್ಟೇ ಜನ ಎಂದು ಹುಕುಂ ಕೊಡುವ ಮಹರಾಯನಿಗೆ

ಹೇಗೆ ಗೊತ್ತು? ಆ ಪ್ರದೇಶದ ಕಷ್ಟನಿಷ್ಠುರ ತಾಪತ್ರಯ, ಎಲ್ಲ ಅವನಿಗೆ ವೇದ್ಯ. ತಿಳಿದೂ ತಿಳಿದೂ, ಅಂತಹವರನ್ನು ರಸ್ತೆಪಾಲುಮಾಡುವುದು ಯಾವ ಧರ್ಮ?

ಮತ್ತೊಂದು ವಿಷಯ....ಆ ಲೈನಿನಮೇಲೆ ದಿನವೂ ಇತ್ತಿಂದತ್ತಲಾಗೂ ಅತ್ತಿಂದಿತ್ತಲಾಗೂ ಬಸ್ ಬಿಟ್ಟುಕೊಂಡು ಬರಬೇಕಾದರೆ, ಎದೆ ಹೊಡೆದುಕೊಳ್ಳುತ್ತದೆ. ಸೀಟಿಲ್ಲ ಅಂತ ನೀವು ಇವತ್ತು ಕೈತೋರಿಸಿ ಅವಲಕ್ಷಣಮಾಡಿದರೆ, ನಾಳೆ ಅದೇ ಜಾಗದಲ್ಲಿ ಪುಂಡರ ತಂಡ ಒಂದು ಸಿದ್ಧ, ರಸ್ತೆಗೆ ಅಡ್ಡವಾಗಿ. ಮುಷ್ಟಿ ಬಿಗಿಯುತ್ತ, ಮೂದಲಿಸುತ್ತಾರೆ. ರಟ್ಟೆ ಹಿಡಿದು ಕೆಳಕ್ಕೆಳೆಯುತ್ತಾರೆ, ಖಾಕಿ ಷರ್ಟಿನವರು ಇಬ್ಬರನ್ನೂ ವೆ. ಆದ್ದರಿಂದ, ಆತ್ಮರಕ್ಷಣೆಗೋಸ್ಕರವಾದರೂ, ದಾರಿಯಲ್ಲಿ ಸಿಕ್ಕುವ ಆ ಸದ್ಗೃಹಸ್ಥರೆಲ್ಲರನ್ನೂ ಹತ್ತಿಸಲೇಬೇಕಾಗುತ್ತದೆ.

ಇನ್ನೊಂದು ಧರ್ಮಸಂಕಟವೂ ಇದೆ, ಡ್ರೈವರುಗಳಿಗೂ ಕಂಡಕ್ಟರುಗಳಿಗೂ. ಸೀಟಿಲ್ಲ, ಅಂತ ಕೂಗಿ ಹೇಳುತ್ತಲೂ, ಒಳಗಿರುವ ಪುಣ್ಯಾತ್ಮರು, 'ಹೋಲ್ಡಾನ್' ಎಂದು ಅರಚಿಕೊಳ್ಳುತ್ತಾರೆ. "ನಿಲ್ಲಿಸಿರೋ! ಪಾಪ! ಬರಲಿ, ಬರಲಿ! ನಾವು ಸರಿದು ಜಾಗ ಕೊಡುತ್ತೇವೆ, ನಿಮ್ಮಪ್ಪನದೇನು ಬಸ್ಸು? ಪಾಪ! ಅವರು ಎಂಟುಜನ ಬೆಳಗ್ಗಿಂದ ಬಿಸಿಲಲ್ಲಿ ಒಣಗುತ್ತಿದಾರೆ! ನೀನು ಏನು ಧರ್ಮರಾಯನ ಅಪರಾವತಾರವೋ? ಯಾವೊತ್ತೂ ಓವರ್‌ಲೋಡ್ ಮಾಡೇ ಇಲ್ಲವೋ?" ಅಂತ ಕೂಗುತ್ತ, ಬೆಲ್‌ಮಾಡುತ್ತಾರೆ.

ಕಡೆಯದಾಗಿ, ಮತ್ತೊಂದು ಮುಖ್ಯ ಕಾರಣವೂ ಇದೆ, ಎನ್ನಿ, ಓವರ್ಲೋಡಿಗೆ!....ದಾರಿಮಧ್ಯೆ ಪೋಲೀಸಿನವರು ಯಾರಾದರೂ, ಹೊಂಚು ಕಾಯುತ್ತ, ಹಿಡಿದುಹಾಕುತ್ತಾರೆ. ಕೋರ್ಟಿಗೆಳೆದು ಜುಲ್ಮಾನೆ ಹಾಕಿಸುತ್ತಾರೆ. ಆ ಜುಲ್ಮಾನೆ ಹತ್ತೋ ಹದಿನೈದೋ, ಅದನ್ನು ಯಾರು ತೆರಬೇಕು? ಅವರ ಅಪ್ಪನ ಆಸ್ತಿ ಮಾರಿ ಕೊಡಬೇಕೇನು, ಅವರು? ಡ್ರೈವರು ಮಾಡದೆ ಇದ್ದರೂ, ಅದಕ್ಕಾಗಿ ಕಂಡಕ್ಟರ್ ಮಹಾಶಯ ಒಂದು ಆಪತ್‌ಧನ ಶೇಖರಿಸಬೇಡವೆ? ದಿನವೂ ನಾಲ್ಕು ಜನರನ್ನು ಓವರ್ಲೋಡುಮಾಡಿ, ದಿನವೂ ಒಂದುಕಡೆ ಸೇರಿಸಿದರೆತಾನೆ, ಹತ್ತು ಹದಿನೈದು ಕೋರ್ಟಿನಲ್ಲಿ ಇರಿಸಿ ಹೊರಬರಲು ಸಾಧ್ಯ.

ಆದರೂ, ನಾವು ಕೆಲವುವೇಳೆ, ಕಂಡಕ್ಟರುಗಳನ್ನು ದೂರುವುದು,....ಶುದ್ಧ ಅನ್ಯಾಯ.

—ಪಾಟಾಳಿ.

---

# ಚಿಕ್ಕಣ್ಣನ ಭಲ್ಲೂಕ ಪ್ರಕರಣ

ಚಿಕ್ಕಣ್ಣ ಶೇವಿಂಗ್ ಸಾಮಗ್ರಿಗಳನ್ನೆಲ್ಲ ಜೋಡಿಸಿಕೊಂಡು ಮುಖದಮೇಲಿನ ಒಂದು ವಾರದ ಬೆಳೆಯ ಕಟಾವಿಗೆ ಅಣಿಮಾಡಿಕೊಳ್ಳುತ್ತಿದ್ದ. ಆಗ ಬೀಗರ ಔತಣಕ್ಕೆ ಅಡಿಗೆಗೆ ಬರಹೇಳುವುದಕ್ಕೆಂದು ಪುಟ್ಟರಾಯರು ಬಂದೇ ಬಂದರು. ಚಿಕ್ಕಣ್ಣನ ತಯಾರಿಯನ್ನು ಕಂಡು "ಏನಯ್ಯಾ, ವಯಸ್ಸು ನಲವತ್ತರ ಮೇಲಾಯಿತು. ಬೆಳಗ್ಗೆದ್ದು ರೇಜರು ಸೋಪು ಇಟ್ಟುಕೊಂಡು ಮುಖಕ್ಷೌರಕ್ಕೆ ಕಲೀತಿದೀಯಾ?"—ಎಂದರು. ತನ್ನೂರಿನಲ್ಲಿ ಮೂರನೆಯ ಸಂಬಂಧಕ್ಕಾಗಿ ಮಾತುಕತೆ ನಡೆಸುತ್ತಿದ್ದ ಚಿಕ್ಕಣ್ಣನಿಗೆ ಮೈಮೇಲೆ ಕಪ್ಪೆ ಎಸೆದಂತಾಯಿತು. ಒಂದುಕ್ಷಣ ಪೆಚ್ಚಾದರೂ ಅದನ್ನು ತೋರಗೊಡದೆ ಉಗುಳು ನುಂಗಿ ತನ್ನ ವರಸೆಯನ್ನ ತೆಗೆದೇ ತೆಗೆದ.

"ಬರೋಣಾಗಲಿ ಸ್ವಾಮಿ"—ಎನ್ನುತ್ತಾ ಸ್ಟೂಲೊಂದನ್ನು ಎಳೆದು ಧೂಳು ಝಾಡಿಸುತ್ತ ರಾಯರಿಗೆ ಪೀಠ ಪೂಜೆಮಾಡಿ ಹಲ್ಲು ಕಿರಿಯುತ್ತಾ "ರೇಜರು ಸೋಪು ಅಂದಿರಾ .. ಅವುಗಳೇನು ಸಾಮಾನ್ಯ ವಸ್ತುಗಳಲ್ಲ ಸ್ವಾಮಿ! ಕೇಳಿ ಬೇಕಾದರೆ ಹೇಳ್ತೀನಿ ಅದರ ಕತೆಯನ್ನ...." ಎಂದು ತನ್ನ ಕಂತೆ ಬಿಚ್ಚಲು ತೊಡಗಿದ.

"ಹೋಗಲಿ ಬಿಡಯ್ಯ .... ನಿನ್ನ ಸೋಪು ರೇಜರುಗಳ ತಲೆ ಬೋಳಿಸಿತು. ಜ್ಞಾಪಿಸಿ ಹೋಗೋಣಾಂತ ಬಂದೆ....ಭಾನುವಾರ....ಇನ್ನೂರಕ್ಕೆ ಏರ್ಪಾಡು...."

"ಅದರ ಜವಾಬ್ದಾರಿ ನಿಮಗೆ ಬಿಟ್ಟಿತು ಅನ್ನಿ .... ಅಂದಹಾಗೆ ರೇಜರಿನ ಸಮಾಚಾರ ಕೇಳಿ...."

"ಥೂ....ಹಾಳಾಗಿಹೋಗಲಯ್ಯ ಅದರ ಕತೆ....ಸದ್ಯ...."

"ಹಾಗಲ್ಲ ಹೇಳ್ತೀನಿ ಕೇಳಿ....ಐದೇ ನಿಮಿಷ. ಕತೆ ಅಂದಿರಾ? ಕತೆ ಅಲ್ಲ ಸ್ವಾಮಿ ನಡೆದದ್ದು....ಅದೂ ಹಾಡು ಹಗಲಲ್ಲೆ ನಡೆದದ್ದು"

"ಹಾಳಾದ ರೇಜರಿನ ಪ್ರಸ್ತಾಪ ಎತ್ತಿ ಕೆಟ್ಟೆ"—ಎನ್ನುತ್ತಾ ರಾಯರು ಎದ್ದು ನಿಂತವರು ಮತ್ತೆ ಸ್ಟೂಲಾಸೀನರಾದರು. ನಿಜವಾಗಿ ನೋಡಿದರೆ ಚಿಕ್ಕಣ್ಣನ ಪರಾಪರಿ ಎಂದರೆ ಅವರ ಕಿವಿಗೂ ಕೊಂಚ ಆಸೆ.

"ನೋಡಿ ಸ್ವಾಮಿ ತಮಗೆ ಗೊತ್ತಿದ್ದ ಹಾಗೆ ಮೊದಮೊದಲು ನಾನು ಆಫೀಸರುಗಳ ಜೊತೆಯಲ್ಲಿ ಅಡಿಗೆ ಕೆಲಸ ಮಾಡುತ್ತಿದ್ದೆನಲ್ಲ. ಆಗ ನೋಡಿ ಸರ್ಕೀಟೇ ಸರ್ಕೀಟು. ಬಂಗಾಳ ಬಿಹಾರ್ ಎಲ್ಲಾ ಓಡಾಡಿದ್ದೇನೆ ಒಬ್ಬ ಅಯ್ಯರ್ ಆಫೀಸರ

ಜೊತೆಗೆ. ನೇಪಾಳದ ಗಡಿತನಕ ಹೋಗಿದ್ದೇನೆ. ಹಾಗೆ ಹೋಗಿದ್ದಾಗಲೇ ನಡೆದ ಸಮಾಚಾರಾನ ಈಗ ಹೇಳ್ತಿರೋದು ನಾನು.

"ನೇಪಾಳದ ಗಡಿ ಅಂದೆನಲ್ಲಾ. ಅಲ್ಲಿ ಬರೇ ಗುಡ್ಡ ಬೆಟ್ಟ ಕಾಡು. ಅಲ್ಲಿಕೂಡ ನಮ್ಮ ಸಾಹೇಬರಿಗೆ ಸರ್ಕೀಟು. ಅವತ್ತು ಕ್ಯಾಂಪ್ ಮಾಡಿದ ಊರೆಂದರೆ ಕತ್ತು ಕುಯ್ದರೂ ಕೇಳುವವರಿಲ್ಲ ಎಂಬಂಥಾದ್ದು. ಹುಲಿಕಾಟ ಅಯ್ತಲ್ಲ, ಕರಡಿಗಳೂ ತುಂಬ ಅಂತ ಮೊದಲೇ ತಿಳಿದಿತ್ತು. ಆದ್ದರಿಂದಲೇ ಕೋವಿ ರಿವಾಲ್ವರ್ ಇಲ್ಲದೆ ಸಾಹೇಬರು ಆ ಕಡೆ ಬರುತ್ತಿರಲಿಲ್ಲ.

"ಅವತ್ತು ಬೆಳಗ್ಗೆದ್ದು ಸಾಹೇಬರಿಗೆ ಕ್ಷೌರಕ್ಕಾಗಿ ಅಣಿಮಾಡ್ತಾ ಇದ್ದೆ. ಸಾಹೇಬರು ಇನ್ನೂ ಎದ್ದಿರಲಿಲ್ಲ...."

"ಅಯ್ಯೋ, ಆ ಕೆಲಸ ಬೇರೆ ಮಾಡಿದ್ದೀಯೇನೋ ಲಫಂಗ!"

"ನಿಜ ಸ್ವಾಮಿ....ಕ್ಷಮಿಸಿ....ಅದನ್ನೂ ಮಾಡಬೇಕಾಗಿ ಬಂತು. ಆ ಅಯ್ಯರ್ ಸಾಹೇಬರು ಚಿನ್ನದಂತಹ ಮನುಷ್ಯ ಒಳ್ಳೆ ಗುಂಡು ಗುಂಡಗೆ ಪೂರಿ ಉಬ್ಬಿದರೆ ಇರುತ್ತಲ್ಲ ಹಾಗಿದ್ದರು....ಏನು ಸಾಮಾನು ಬೇಕಾದರೂ ನಾನೇ ತೆಕ್ಕೊಡಬೇಕು ಅವರಿಗೆ. ಎದ್ದು ಓಡಾಡುವುದೆಂದರೆ ಸ್ವಲ್ಪ ಕಷ್ಟವೇ. ಇಂಥವರಿಗೆ ಯಾಕಪ್ಪಾ ಈ ಸರ್ಕೀಟಿರುವ ನೌಕರಿ ಎಂದು ನನಗೇ ಅನ್ನಿಸಿದ್ದುಂಟು. ಅವರು ಒಂದು ಥರದಲ್ಲಿ ಸ್ಥಿರ ಜೀವಿ.

"ಹೇಳ್ತಾ ಇದ್ದಹಾಗೆ ಕ್ಷೌರಕ್ಕೆ ಅಣಿಮಾಡ್ತಾ ಇದ್ದೆನಲ್ಲ. ಆಗ ನೋಡಿ ಕೇಳಿಸ್ತು ಹೊರಗಡೆ ಯಾರೋ ಕೂಕ್ಕೊಂಡಹಾಗೆ—ಖೂನಿಮಾಡಿದರೆ ಕೂಕ್ಕೋತಾ ರಲ್ಲಾ—ಆ ಥರ. ಅಯ್ಯೋ ಏನ್ಬಂತಪ್ಪಾ ಅಂತ ಹೊರಕ್ಕೋಡಿದೆ ನೋಡಿದರೆ.... ಏನು ನೋಡೋದು ಕಣ್ಣಿಗೆ ಮೆಣಸಿನಪುಡಿ ಎರಚಿದಹಾಗಾಯಿತು. ಒಂದಿಪ್ಪತ್ತು ಗಜ ದೂರದಲ್ಲಿ ರಾಯರು ನಿಂತಿದಾರೆ. ಯಾವುದೋ ಒಂದು ಭಯಂಕರವಾದ್ದು ಅವರನ್ನು ತಬ್ಬಿಹಿಡಿದುಬಿಟ್ಟಿದೆ. ಕಾಡು ಮನುಷ್ಯರೇನಾದರೂ ಈ ಥರ ಇರಬಹುದೆ? ಆಗಿರಲಾರದು. ಬಂಗ್ಲೆ ಜವಾನ ಹೇಳ್ತಿದ್ದಹಾಗೆ ಕರಡಿ ಗಿರಡಿ....? ಹುಂ ಥಟ್ಟನೆ ಹೊಳೀತು. ಕರಡೀನೇ ಇದು. ಮೈಮೇಲಿರೋ ರೋಮದ ರಾಶಿ ನೋಡಿದರೆ ತಿಳಿಯೋದಿಲ್ವೆ. ಅಯ್ಯೋ ಇನ್ನೇನ್ ಗತಿ. ಜವಾನನ್ನ ಕೂಗೋಣ ಎಂದರೆ ಅವನ ದರಿದ್ರ ಹೆಸರೇ ಬಾಯಿಗೆ ಬರಲೊಲ್ಲದು. "ಅಯ್ಯೋ ಕರಡಿ ಬಂದಿದೆ ಸಾಹೇಬರನ್ನ ಹಿಡಕೊಂಡಿದೆ" ಅಂತ ಕನ್ನಡದಲ್ಲೇ ಬೊಬ್ಬೆ ಹೊಡೆದೆ. ತಮಿಳಿನಲ್ಲಿ ಅರಚಿದೆ. ಹಿಂದಿಯಲ್ಲಿ ಕೂಗಿದೆ. ಆದರೆ ಕೇಳೋರು ಯಾರು? ಸಾಹೇಬರಿಗೋ ಗಂಟಲೇ ಅಡಗಿಹೋಗಿದೆ. ಪಾಪ ಕತ್ತು ಮಾತ್ರ ತಿರುಗಿಸಿ ನನ್ನನ್ನ ನೋಡೋದಕ್ಕೆ ಪ್ರಯತ್ನಿಸ್ತಿದಾರೆ ಭೀತೀಲಿ ಬೆಂದುಹೋಗಿದ್ದರೆಂತ ಕಣ್ಣುಗಳೇ ಹೇಳ್ತಿದಾವೆ. ಅಯ್ಯೋ ಏನು ಮಾಡಬೇಕು ನಾನು! ಊರಿರೋದು ಅರ್ಧಮೈಲಿ ಆಚೆಗೆ.

ಬೆಳಗ್ಗೆದ್ದು ಬೊಬ್ಬೆ ಹೊಡೆದರೆ ಯಾರು ಬರುತ್ತಾರೆ? ಕೈಕೈ ಹಿಸುಕಿಕೊಂಡೆ. ಅಷ್ಟರಲ್ಲಿ ಜ್ಞಾಪಕಕ್ಕೆ ಬಂತು ನೋಡಿ ...ಸಾಹೇಬರ ಬಂದೂಕು.... ರಿವಾಲ್ವಾರು! ಓಡಿದೆ ಒಳಕ್ಕೆ. ಟ್ರಂಕ್‌ನಿಂದ ತೆಗೆದುಬಿಟ್ಟು ಹೊರಕ್ಕೆ ತಂದೆ ಆದರೇನು ಮಾಡೋದು? ನಾನೆಂದೂ ಗುಂಡು ಹಾರಿಸಿದವನಲ್ಲ "

"ಹಾರಿಸದೇ ಏನು! ಈಗ ಹಾರಿಸ್ತಿದೀಯಲ್ಲ ಒಂದೇ ಸಮನೆ!"– ಎಂದರು ಪುಟ್ಟೋರಾಯರು.

ಹಾಗಲ್ಲ ಸಾರ್....ಕೋವಿ, ಪಿಸ್ತೂಲುಗಳ ಸಮಾಚಾರ ನಾನು ಹೇಳೋದು. ಇಂಥ ಆಯುಧ ಇದ್ದೂ ಕೂಡ ಕರಡೀನ ಕೊಂದು ಸಾಹೇಬರನ್ನ ಕಾಪಾಡೋ ಯೋಗ್ಯತೆ ಇಲ್ಲದೇ ಹೋಯಿತಲ್ಲ ಎಂದು ಪೇಚಾಡಿದೆ. ಆಗಿದ್ದಾಗಲಿ ಎಂತ ಬಂದೂಕನ್ನ ಕರಡಿಗೆ ಗುರಿ ಇಟ್ಟು ಚೆನ್ನಾಗಿ ಬೀಸಿ ಎಸೆದೆ. ಆದರೆ ಆ ದರಿದ್ರ ಬಂದೂಕು ಪಕ್ಕದಲ್ಲಿದ್ದ ಒಂದು ಮರಕ್ಕೆ ಹೋಗಿ ಬಡೀತು. ಇನ್ನುಳಿದಿದ್ದು ರಿವಾಲ್ವಾರು. ಅದನ್ನೂ ಎಸೆದೆ. ಅದೋ....ಹೋಗಿ ಸಾಹೇಬರ ತಲೇಗೇ ಬಡಿಯಿತು. ಅವರು ಒಮ್ಮೆ ಘಟ್ಟಿಯಾಗಿ ನರಳಿದರು. ಎಂಥಾ ಪಾಪಿ ನಾನು ಎಂದು ಕೂಗಿಕೊಂಡೆ. ಇನ್ನು ಬದುಕಿದ್ದರೂ ನಾನು ಶುದ್ಧ ದಂಡ ಎಂದುಕೊಂಡು ಒಳಕ್ಕೋಡಿದೆ. ಬಂಗ್ಲೆ ಜವಾನನ ಕಠಾರಿ ಜ್ಞಾಪಕಕ್ಕೆ ಬಂತು. ಅದನ್ನ ಎತ್ತಿಕೊಂಡು ಬಂದು ಕರಡಿ ಹತ್ತಿರಕ್ಕೆ ಜೀವದಾಸೆ ಬಿಟ್ಟು ಓಡಿದೆ. ಎಲ್ಲಾ ಒಂದು ನಿಮಿಷದಲ್ಲಿ ಕಠಾರಿ ಎತ್ಕೊಂಡು ನನ್ನ ಶಕ್ತೀನೆಲ್ಲ ಉಪಯೋಗಿಸಿ ರೊಂಯ್ ರೊಂಯ್ ರೊಂಯ್ ಅಂತ ಕರಡೀನ ಮೂರುಸಲ ತಿವಿದೆ. ಆದರೇನು? ಕರಡಿ ಗುರುಗುಟ್ಟಿತೇ ವಿನಾ ರಾಯರನ್ನ ಬಿಡಲಿಲ್ಲ. ಅದಕ್ಕೆ ಪೆಟ್ಟೇನೋ ಆದಹಾಗೆ ಕಾಣಲಿಲ್ಲ. ರೋಮ ಸ್ವಾಮಿ. ಮೈತುಂಬ ಬೂದುಬಣ್ಣದ ರೋಮರಾಶಿ. ಶುದ್ಧ ಕರಡಿಜಾತಿ. ಕಠಾರಿಯಿಂದ ಕರಡೀನ ತಿವಿಯೋದೂ ಒಂದೇ, ಹುಲ್ಲಿನ ರಾಶಿ ತಿವಿಯೋದೂ ಒಂದೇ. ಹಾಗಾಯಿತು ನನ್ನವಸ್ಥೆ. ಇನ್ನುಳಿದಿರೋದೇನು ನನ್ನನ್ನೆ ತಿವಿದುಕೊಂಡುಬಿಡೋಣ ಅನ್ನಿಸ್ತು. ಆದರೆ ಸಾಹೇಬರನ್ನ ಕರಡಿ ಕೈಯಲ್ಲಿ ಹಿಂಸೆಪಟ್ಟು ಸಾಯೋದಕ್ಕೆ ಬಿಟ್ಟುಬಿಟ್ಟು ನಾನು ಹೀಗೆ ಸಾಯೋದು ನ್ಯಾಯವೇ ಅಂತ ತೋಚಿತು ಮರುಕ್ಷಣಕ್ಕೆ...."

"ಅಂದರೆ ಕಠಾರಿ ತಗೊಂಡು ಸಾಹೇಬರನ್ನೇ ತಿವಿದೆಯೇನೋ ಪಾಪಿ!"

"ಛೆ ಛೆ ಛೆ ಒಳ್ಳೆ ವಿಚಾರ ಹೇಳ್ತಾ ಇದೀರಿ ರಾಯರೆ. ನಿಮಗೇನೋ ಈಗ ನಗು ಬರುತ್ತೆ. ಆದರೆ ಆಗ ನನ್ನ ಪಾಡು ಯಾರಿಗ್ಬೇಕು! ಸಾಹೇಬರ ಅವಸ್ಥೆ ಕಣ್ಣಿಂದ ನೋಡೋಕೆ ಸಾಧ್ಯವೆ? ಕರಡಿ ತಬ್ಕೊಂಡುಬಿಟ್ಟಿದೆ. ಬಿಡ್ಲೇ ಬಿಡ್ದು. ಅವರನ್ನ ಬಿಟ್ಟು ನನ್ನಾದರೂ ಹಿಡೀಲಿ ಅನ್ನಿಸ್ತು. ಆದರೆ ಅಂಥಾ ದೊಡ್ಡ ಜೀವನ್ನ ಬಿಟ್ಟು ನನ್ನಂಥ ನರಪೇತಲನ್ನ ಖಾಯುಸಾ ಮಾಡೋದಿದೆಯೆ ಕರಡಿ? ಸಾಹೇಬರ ದುಂಡು ದುಂಡು ದೇಹಾನ ಕಂಡರೆ ನಮಗೇ ಹಸಿವು ಅಡಗಬೇಕು—ಮನುಷ್ಯರಿಗೆ!

ಹಾಗೆ ತುಂಬಿ ತುಳುಕ್ತಾ ಇರೋ ದೇಹ ಅವರದು. ಅಂದಮೇಲೆ ಕರಡಿ ಅವರನ್ನೇ ಪಟ್ಟಾಗಿ ಹಿಡಿದದ್ದು ಆಶ್ಚರ್ಯವಲ್ಲ ಪುಟ್ಟೂರಾಯರೇ! ಹಾಗಲ್ಲದೆ ಕರಡಿ ಏನಾದರೂ ಅವರನ್ನು ಬಿಟ್ಟು ನನ್ನ ಹಿಡಿದಿದ್ದರೆ....ಕರಿದಿಟ್ಟ ಹಪ್ಪಳ ಸಂಡಿಗೇನ ಕೈಯಾಗೆ ಒತ್ತಿದರೆ ಆಗೋಹಾಗೆ ಮೂಳೆ ಮೂಳೆಗಳೆಲ್ಲ ಪುಡಿ ಪುಡಿ ಪುಡಿ ಆಗ್ತಾ ಇದ್ವು.... ಯಾಕೆ ನಗ್ತಾ ಇದೀರಿ ಸ್ವಾಮಿ. ಕರಡಿಗ್ಳು ಮನುಷ್ಯರನ್ನ ಕೊಲ್ಲೋ ರೀತಿ ಅದು!

"ಇದ್ದಕ್ಕಿದ್ದ ಹಾಗೆ ನನಗೆ ಯಾಕೋ ಮಂಕು ಕವಿದ ಹಾಗಾಯಿತು. ಕಣ್ಣು ಕತ್ತಲೆ ಕಟ್ಟಿಬಂತು. ತಿಕ್ಕಲು ಹಿಡಿದಹಾಗೆ ಪುನಃ ಓಡಿದೆ ಒಳಕ್ಕೆ. ಮೂಲೇಲಿ ಇಟ್ಟಿತ್ತು ರಾಮಪಟ್ಟಾಭಿಷೇಕದ ಪಟ. ಅದು ಸಾಹೇಬರ ಕ್ಯಾಂಪಿನ ದೇವರು. ಹೋಗಿದ್ದೇ ಆ ಪಟಕ್ಕೆ ಅಡ್ಡಬಿದ್ಬಿಟ್ಟೆ. ಪಟದಲ್ಲಿ ಜಾಂಬವಂತ ಬೇರೆ ಇದ್ದಹಾಗೆ ಕಂಡಿತು. "ಹೇ ಭಲ್ಲೂಕ ಕುಲ ಲಲಾಮನೇ ನಿನ್ನ ವಂಶಜನೊಬ್ಬ ಸಾಹೇಬರನ್ನು ಕೊಲ್ತಾ ಇದಾನೆ. ಅವರ ಜೀವ ಉಳಿಸೋ" – ಎಂತ ಮೊರೆ ಇಟ್ಟೆ ಜಾಂಬವಂತ ನಿಗೆ. ಒಂದುಕ್ಷಣ ಹಾಗೆ ಧ್ಯಾನದಲ್ಲಿದ್ದೆ. ಜಾಂಬವಂತಪ್ರಭು ಕಣ್ಣು ತೆರೆದ ನೋಡಿ! ಒಂದು ಹೊಸ ಪ್ಲಾನು ಹೊಳೀತು. ವರಾಂಡಕ್ಕೆ ಓಡಿದೆ. ರಾಯರಿಗೆ ಶೇವಿಂಗ್‌ಗೆ ಅಣಿಮಾಡ್ತಾ ಇದ್ದೆ ಎಂದು ಪ್ರಾರಂಭದಲ್ಲೇ ಹೇಳಿದ್ದೆನಲ್ಲಿ. ರೇಜರ್ ಸೋಪು ನೀರು ಅಣಿಮಾಡಿಟ್ಟಿದ್ದು ಹಾಗೇನೇ ಇತ್ತು. ಎಲ್ಲಾನು ಹಿಡಕೊಂಡು ಓಡಿದೆ ಕರಡಿ ಇದ್ದಲ್ಲಿಗೆ. ಮುಂದಿನ ಕೆಲಸವೆಲ್ಲ ಮಿಂಚಿನ ವೇಗದಲ್ಲಿ ನಡೆಯಿತು. ಕರಡಿ ಪಕ್ಕೆಗೆ ಬಿಸಿನೀರು ಚೆಲ್ಲಿದೆ. ಸರಸರನೆ ಸೋಪನ್ನ ಉಜ್ಜಿಬಿಟ್ಟು ರೇಜರ್ ಎತ್ತಿಕೊಂಡವನೆ ಕರ್ ಕರ್ ಕರ್ ಅಂತ ಮುಗಿಸಿಬಿಟ್ಟೆ ಕೆಲಸಾನ. ಪಕ್ಕದಿಂದ ನಾಲ್ಕುಮುಷ್ಟಿ ಹೊರಟುಹೋಯಿತು. ಹಾಗೆ ಹೋದ ಜಾಗದಲ್ಲಿ ಕರಡಿ ಮೈ ನೋಡಿದರೆ ಕೆಂಪಗೆ, ಮುಟ್ಟಿದರೆ ರಕ್ತ ಬರೋ ಹಾಗಿತ್ತು. ರೇಜರ್ ಬಿಸಾಡಿ ಕಠಾರಿ ಎತ್ಕೊಂಡು ಸರಕ್ ಅಂತ ಚುಚ್ದೆ ನೋಡಿ ಕರಡಿ ಪಕ್ಕೇಗೆ. ರಾಯರನ್ನ ಬಿಟ್ಟು ಕರಡಿ ಧೊಪ್ಪಂತ ನೆಲಕ್ಬಿತ್ತು! ರಕ್ತದ ಬುಗ್ಗೆ ನನ್ನ ಮುಖಕ್ಕೆ ಹಾರಿದೇಟಿಗೆ ನನಗೆ ಪ್ರಜ್ಞೆ ಇಲ್ಲ!...."

"ಅಂತೂ ಪರವಾಗಿಲ್ಲ ರೇಜರ್‌ನಿಂದ ಕರಡಿ ಶಿಕಾರಿ ಮಾಡೇಬಿಟ್ಟೆ ಅನ್ನು!"

"ಹಿ ... ಹಿ ... ಹಿ ... ಏನೋ ಜಾಂಬವಂತ ಸ್ವಾಮಿ ದಯೆ.... ಸಾಹೇಬರ ಪುಣ್ಯ ....ಆದರೂ ರೇಜರಿನ ಮಹತ್ವ ....ಸಂದರ್ಭ ಬಂದರೆ....ಎಷ್ಟೂಂತ...."

"ಥೂ! ನಿನ್ನ ರೇಜರನ್ನ ಕರಡೀ ಹಿಡೀತು! ಹೀಗಿದ್ದ ಕತೆ ನಾನೆಲ್ಲೊ ಓದಿದೀನಿ. ಹುಂ....ರೇಜರ್ ಎತ್ಕೊ ಕೆಲಸಕ್ಕೆ ತೊಡಗು....ಸದ್ಯ ಭಾನುವಾರ ಮರೀಬೇಡ" ಎನ್ನುತ್ತ ರಾಯರು ಹೊರಟುಹೋದರು.

ಚಿಕ್ಕಣ್ಣ ಇವರ ಬಾಯಿಯಿಂದ ಬದುಕಿಕೊಂಡೆನಲ್ಲಾ ಎಂದು ನಾಲಗೆ ಕಚ್ಚಿ ಕೊಂಡ. ಆಂಜನೇಯನಿಗೆ ಕೈಮುಗಿದ.

—ರಾಮಕೃಷ್ಣ.

# ಶಂಭುವಿನ ಕಥೆ

---

ಹೇಳ್ತೀನೆ ಕೇಳಿ. ಮೊನ್ನೆ ನಾನು ಸುಪ್ರಸಿದ್ಧ ಕಾದಂಬರಿಗಾರರೊಬ್ಬರ ನವೀನ ಕಾದಂಬರಿಯೊಂದನ್ನು ಓದುತ್ತಿದ್ದೆ. ಪುಸ್ತಕದ ರೊಟ್ಟೆನಮೇಲೆ, ಯಾವಳೋ ಹೆಂಗಸು, ಅರ್ದಂಬರ್ದ ಸೀರೆ ಉಡುತ್ತಿರುವಾಗಲೇ ಆಕೆಯನ್ನು ಪತ್ತೆಹಚ್ಚಿ ಓದುಗರ ಮೆಚ್ಚಿಗೆಗೋಸ್ಕರ ಬಣ್ಣದ ಶಾಯಿಯಲ್ಲಿ ಅಚ್ಚುಹಾಕಿದ್ದರು. ಕಾದಂಬರಿ ಒಳಕ್ಕೆ ಪ್ರವೇಶಿಸಿ ಎನ್ನುವಂತಿತ್ತು ಅವಳ ಕಣ್ಣಿನ ಚರ್ಯೆ! ನಾನೂ ಪ್ರವೇಶಿಸಿ ಸುಮಾರು ೨೫ ಪುಟ ಓದಿಮುಗಿಸಿದೆ. ಕಾದಂಬರಿ ನಾಯಕನಾದ ಶಂಭುವಿಗೆ ಚಿಗುರುಮೀಸೆ ಬಲಿಯುತ್ತಿದ್ದಕಾಲ. ತುಂಬು ಕೆನ್ನೆ, ಬೊಗಸೆ ಗಣ್ಣುಗಳು, ಕೆದರಿದ ಕ್ರಾಪು, ಮಾಸಿದ ಪೈಜಾಮು, ಬಾಯಲ್ಲಿ ಸಿಗರೇಟು, ಕೈಲಿ ಬ್ಯಾಗು. ಅಂದಮೇಲೆ ಅವನ ಉದ್ಯೋಗ—ಕಲಾಸೇವೆ! ಮಳೆಬಂದ ಸಾಯಂಕಾಲ, ಬಾನಿನಲ್ಲಿ ಜೋಡಿ ಕಾಮನಬಿಲ್ಲು ಕಾಣಿಸಿಕೊಂಡಾಗ ಶಂಭು ಕೂಲಿಂಗ್ ಗ್ಲಾಸ್ ಹಾಕಿಕೊಂಡು ಪ್ರಭಾತ್ ಟಾಕೀಸ್ ಮುಂದೆ ನಡೆದಿದ್ದ. ನೋಡಿ, ಇಷ್ಟೆ ನಾನು ಆ ಪುಸ್ತಕದಲ್ಲಿ ಓದಿದ್ದುದು. ಅಷ್ಟುಹೊತ್ತಿಗೆ ಎದುರುಮನೆ ಗೋವಿಂದರಾಯ ಬಂದು ಕಾದಂಬರಿ ಓದುಕ್ಕೆ ಕೊಡು ಎಂದು ಪೀಡಿಸಿದ. ಹೆಂಡತೀನ ತೌರಿಗೆ ಕಳಿಸಿದಾನೆ, ಪೂರ್ ಫೆಲೋ ಈಗಲಾದರೂ ಓದಿಕೊಳ್ಳಲಿ ಎಂದು ಕಾದಂಬರಿಯನ್ನ ಅವನಿಗೆ ಕೊಟ್ಟು ಕಳಿಸಿದೆ. ಅವನು ಅದನ್ನು ಮತ್ತೆ ಹಿಂದಕ್ಕೆ ಕೊಡಲಿಲ್ಲ. ನಾನು ಮುಂದಕ್ಕೆ ಓದಲಿಲ್ಲ. ಆದರೆ ಶಂಭುವಿನ ಕಥೆ ಮುಂದಕ್ಕೇನಾಯಿತು ಎಂಬುದು ನನಗೆ ತಿಳಿದಿದ್ದು ಇನ್ನೊಬ್ಬ ಸುಪ್ರಸಿದ್ಧ ಕಾದಂಬರಿಗಾರರ ಮುಹಾಕಾದಂಬರೀಲಿ!

ಸೋಮಯ್ಯನ ಮಗಳಿಗೆ ಗಂಡು ಗೊತ್ತುಮಾಡೋಕೆ ಬೀಗರ ಮನೇಗೆ ಬರಬೇಕೆಂದು ಸೋಮಯ್ಯ ನನ್ನನ್ನು ಬಲವಂತಪಡಿಸಿದ್ದ. ಅವನ ಜೊತೆಯಲ್ಲಿ ಅರಳಿಪೇಟೆಗೆ ಬೀಗರಮನೆಗೆ ಹೋಗಿದ್ದೆ ಬಾಗಿಲಲ್ಲೇ ಸೋಮಯ್ಯನ ಭಾವಿ ಅಳಿಯ "ಕಂಬನಿಯ ಚುಂಬನ" ಓದುತ್ತಿದ್ದ ಸೋಮಯ್ಯನನ್ನು ಒಳಗೆ ಕೂರಿಸಿ ನಾನು ಆ ಧಾಂಡಿಗನಿಂದ ಆ ಕಾದಂಬರೀನ ಚೀಣ ಬೀಸಣಿಗೆಯಹಾಗೆ ಕಮಾನಿಸಿ, ಜ್ಯೋತಿಷ್ಕ ಓಲೆಗರಿ ಹಾಳೆ ಪುಸ್ತಕವನ್ನು ದಬ್ಬಳ ಚುಚ್ಚಿ ತೆಗೆಯುವಹಾಗೆ, ಒಳ್ಳೆ ಶಕುನದಲ್ಲಿ ಪುಸ್ತಕ ಬಿಚ್ಚಿದೆ. ೩೦-೩೧ನೆ ಪುಟ ಬಂತು ನಾಲ್ಕೈದುಕಡೆ ಶಂಭುವಿನ ಹೆಸರು! ನನ್ನ ಕೂತೂಹಲ ಕೆರಳಿತು. ಓದುತ್ತೇನೆ—ಹಿಂದೆ ನಾನು ಯಾವುದೋ

ಕಾದಂಬರೀಲಿ ಓದಿದ ಶಂಭುವೇ! ಅದೇ ಟಾಕೀಸ್! ಟಿಕೆಟ್ ಕೊಂಡುಕೊಳ್ಳೋಕೆ ಕಿಸೆಯಿಂದ ದುಡ್ಡು ತೆಗೆಯುವ ಸಮಾರಂಭದ ವಿವರಣೆ! ಸರಿಮುಂದಕ್ಕೆ ಓದುಕೊಂಡು ಹೋದೆ. ಶಂಭುವು ಟಿಕೆಟ್ ತೆಗೆದುಕೊಂಡು ಇನ್ನೇನು ಒಳಕ್ಕೆ ನುಗ್ಗುವುದರಲ್ಲಿದ್ದ. ಎಲ್ಲಿತ್ತೋ ಏನೋ ಒಂದು ಮನಿಪರ್ಸು ಅವನ ಕಾಲಿಗೆ ಇದ್ದಕ್ಕಿದ್ದ ಹಾಗೇ ಸೋಕಿತು. ಶಂಭುವು ಬಗ್ಗಿ ಅದನ್ನು ಎತ್ತಿಕೊಂಡು ಹಿಂದಕ್ಕೆ ತಿರಿಗಿನೋಡುತ್ತಾನೆ. ಓರ್ವ ಸುಂದರಯುವತಿ ನಿಂತಿದಾಳೆ ನೆಟ್ಟದೃಷ್ಟಿ ಬೀರುತ್ತ ಆ ಪರ್ಸು ಆ ಸುಂದರಿಯದೆಂದು ಶಂಭುವಿಗೆ ಗೊತ್ತಾಗಲು ಬಹಳಕಾಲ ಬೇಕಾಗಲಿಲ್ಲ. ಅವನು ಪರ್ಸನ್ನು ಆ ಹುಡುಗಿಯಮುಂದೆ ಹಿಡಿದ. ಯಥಾಪ್ರಕಾರ ಆಗಬೇಕಾದ ಪ್ರತಿಕ್ರಿಯೆ ನಡೆ ಯಿತು. ಪರಸ್ಪರ ಪರಿಚಯವಾಯಿತು. ವಿಳಾಸ ಬರದುಕೊಂಡರು. ಘಂಟೆ ಎಷ್ಟು ಕೇಳಿದರು. ಎರಡನೆ ಆಟಕ್ಕೆ ಹೋಗೋಣ, ನೀನು ಇಲ್ಲೇ ಫುಟ್‌ಪಾತಿನಮೇಲೆ ಕಾದಿರು ಎಂದಳು ನಾಯಿಕಿ, ಜಡೆಯನ್ನು ಎದೆಮೇಲೆ ಜಾರಿಸುತ್ತ. ಅಷ್ಟುಹೊತ್ತಿಗೆ ಒಳಗಿಂದ ಸೋಮಪ್ಪ ಕೂಗಿಕೊಂಡ ನನ್ನನ್ನ ಉಪ್ಪಿಟ್ಟು ಕಾಫೀಗೆ. ಆ ವೇಳೆಗೆ ನೂರುಪುಟ ಓದಿದ್ದೆ ಕಾದಂಬರಿ ಮುಚ್ಚಿಟ್ಟು ಕಾಫಿ ಕುಡಿದು ನಾನೂ, ಸೋಮಯ್ಯ ವಾಪಸ್ ಬಂದೆವು. ನನಗೆ ತಿರಿಗಿ ಆ ಕಾದಂಬರಿ ಎಲ್ಲೂ ಸಿಗಲಿಲ್ಲ.

ಆದರೆ ಶಂಭುವಿನ ಮುಂದಿನ ಚರಿತ್ರೆಯನ್ನು ನಾನು ಓದಿದ್ದು ದೀಪಾವಳಿ ದಿನ ಪ್ರಕಟವಾದ "ಗವಾಕ್ಷಿಯ ಮೂಲಕ" ಎನ್ನುವ ನವೀನಕಾದಂಬರಿಯಲ್ಲಿ,—ನನ್ನ ಹಿರಿಮಗಳು "ನನಗೆ ಕಾಲೇಜಿನಲ್ಲಿ ಈ ಪುಸ್ತಕ ಪ್ರೈಜ್ ಕೊಟ್ಟರು ಅಣ್ಣ ಬಹಳ ಆದರ್ಶವಾಗಿದೆ, ಓದು" ಎಂದು ಹೇಳಿ ನನಗೆ ಕೊಟ್ಟಾಗ! ನನ್ನ ಹಿಂದಿನ ಅನುಭವ ವನ್ನು ಉಪಯೋಗಿಸಿಕೊಂಡು ನಾನು "ಗವಾಕ್ಷಿಯ ಮೂಲಕ" ಕಾದಂಬರಿಯನ್ನು ೧೨೫ನೆ ಪುಟದಿಂದ ಓದತೊಡಗಿದೆ—ಆಶ್ಚರ್ಯ! ಕಥಾನಾಯಕನಾದ ಶಂಭುವು ಸುಂದರಿಗೋಸ್ಕರ ೮ ಗಂಟೆ ಇಂದಲೇ ಫುಟ್‌ಪಾತಿನಮೇಲೆ ಕಾಯುತ್ತ ನಿಂತು ಕೊಂಡಿರುವ ವಿವರಣೆ ರಸವತ್ತಾಗಿ ಸಾಗಿದೆ. ೯ ಗಂಟೆಯಾದರೂ ಸುಂದರಿಯು ಬರದೆ ಹೋದುದನ್ನು ತಾಳಲಾರದೆ ಶಂಭುವು ಆತ್ಮಹತ್ಯೆಯ ಯೋಚನೆಯನ್ನು ಮಾಡುತ್ತಾನೆ ಆಕಾಶದಲ್ಲಿ ಗುಡುಗು ಸಿಡಲು ಕೇಳಿಬರುತ್ತದೆ. ಚಂಡಮಾರುತ ಬೀಸಿ ಪ್ರಕೃತಿ ಅಲ್ಲೋಲ ಕಲ್ಲೋಲವಾಗುತ್ತದೆ. ಶಂಭುವಿನ ಕಣ್ಣಿಗೆ ಧೂಳುತುಂಬಿ ಕೊಂಡು ಒದ್ದಾಡುತ್ತಾನೆ. ನಾಯಿಕಿ ಸುಂದರಿಯು ಆ ಗಳಿಗೆಯಲ್ಲಿ ಬಳುಕುತ್ತ ತಲೆಹಾಕುತ್ತಾಳೆ. ಶಂಭುವಿಗೆ ರೋಮಾಂಚನವಾಗಿ ಇಬ್ಬರೂ ಎರಡನೆ ಆಟವನ್ನು ಬಹಳ ಚಮತ್ಕಾರವಾಗಿ ನೋಡುವರು. ಸುಮಾರು ಎರಡುಗಂಟೆಗಳಕಾಲ ಅವ ರಿಬ್ಬರೂ ಪ್ರೇಮ-ಕಾಮ, ಮುಂತಾದ ದುರವಸ್ಥೆಗಳನ್ನು ಕತ್ತಲಲ್ಲೇ ಚರ್ಚೆಮಾಡು ವರು. ಅನಂತರ ಆ ಗಡುನಿಶೆಯಲ್ಲಿ ಇಬ್ಬರೂ ಪಟ್ಟಣದ ಪ್ರಮುಖ ಹೋಟಲಿಗೆ ಹೋಗಿ ರಾತ್ರಿ ಕಳೆಯುವರು. ಅಲ್ಲಿಗೆ ಸುಮಾರು ೨೫೦ ಪುಟ ಮುಗಿಯಿತು. ಮುಂದಕ್ಕೆ ಓದುವುದು ಶ್ರೇಯಸ್ಸಲ್ಲ ಎಂದು ಪುಸ್ತಕವನ್ನು ಮುಚ್ಚಿದೆ. ಮಗಳನ್ನು

ಕರೆದು "ನಿನಗೆ ಈ ಪುಸ್ತಕ ಬಹುಮಾನವಾಗಿ ಬಂದಿರಬಹುದಮ್ಮ. ಆದರೂ ಪಕ್ಕದಮನೆ ಲೀಲಳಿಗೂ ಕೊಡು, ಅವಳೂ ಓದಲಿ" ಎಂದು ಹೇಳಿ ಕಾದಂಬರಿ ಕೊಟ್ಟುಕಳಿಸಿದೆ. ಯಾತಕ್ಕೆ ಅಂತೀರೋ? ಲೀಲಳ ಮನೆಗೆ ಕೊಟ್ಟ ಯಾವ ಕಾದಂಬರೀನೂ ಹಿಂದಕ್ಕೆ ಬರುಲ್ಲ. ನಾವು ಸುಸಂಸ್ಕೃತರಾಗಿ ಬದುಕಬಹುದು. ಇಷ್ಟೇ ಅದರ ಗುಟ್ಟು—

ಶಂಬುವಿನ ಕಥೆ ಅಷ್ಟಕ್ಕೇ ನಿಲ್ಲಿಸಿಬಿಡುತ್ತೀರ ಅಥವ ಮುಂದಕ್ಕೂ ಓದುತ್ತೀರ ಎಂದು ನೀವು ಪ್ರಶ್ನೆ ಕೇಳಬಹುದು—

ಅದನ್ನೇ ಈಗ ನಾನು ಯೋಚನೆ ಮಾಡುತ್ತಿರುವುದು. ಹೊಸದಾಗಿ ಪ್ರಕಟವಾದ ಯಾವುದಾದರೂ ಒಂದು ಕಾದಂಬರಿಯನ್ನು ಎತ್ತಿಕೊಂಡು ೨೫ನೆ ಪುಟದಿಂದ ಮುಂದಕ್ಕೆ ಒಂದುನೂರು ಪುಟ ಓದಿ ಶಂಭುವಿನ ಕಥೆಯನ್ನು ಮುಗಿಸಿಬಿಡುವುದೆ? ಅಥವ ಅಷ್ಟನ್ನೂ ಒಂದೇ ಕಾದಂಬರೀಲಿ ಓದುವ ಬದಲು? ಒಂದೊಂದು ಕಾದಂಬರೀಲಿ ಒಂದೊಂದು ಪುಟದಹಾಗೆ ನೂರು ಕಾದಂಬರಿಗಳನ್ನು ಓದಿ ಶಂಭುವಿನ ಕಥೆಯನ್ನು ಮುಗಿಸುವುದೆ? ಅಥವ ಅರ್ಧ ಪುಟದಹಾಗೆ ಇನ್ನೂರು ಕಾದಂಬರಿಗಳಲ್ಲಿ ಶಂಭುವಿನ ಕಥೆಯನ್ನು ಪೂರೈಸುವುದೆ? ಅಥವ ಒಂದೊಂದು ಕಾದಂಬರೀಲೂ ಎರಡೆರಡು ಸಾಲುಗಳಷ್ಟು ಮುಂದು ಮುಂದಕ್ಕೆ ಓದುಕೊಂಡುಹೋಗಿ....... ?!

—ಹಾ. ರಾ.

---

## ಹಾದಿಯಲ್ಲಿ ಕೇಳಿಸಿದುದು

"ನೋಡಯ್ಯ—ಈಗೆರಡು ಮೂರು ವರ್ಷಗಳಿಂದ ಈ ಗುರುತುಮಾಡಿದ ನೋಟುಗಳ ಹಾವಳಿ ಜಾಸ್ತಿಯಾಗಿ ನಮಗಂತೂ ಈಗ ನಮ್ಮ ಸಂಬಳ ತಕೋಳೋಕೆ ಸಂಕೋಚವಾಗುತ್ತೆ" ಅದೂನೂ ಲಂಚಾಂತ ಎಲ್ಲಿ ಹಿಡೀತಾರೋಂತ!"

ಹೌದು—ಆದರೆ ದುಡಿದಿದ್ದರೆತಾನೇ ಅದೂನೂ ಸಂಬಳ?

—"ಕೇಫ"

---

# ಇಮದ್ಗಡ್ಡೆ

ಯಾವ್ದೋ ದೇಸದ್ ದೊರೆಯಂತೆ
ಸಬೆ ಕರದ್ನಂತೆ
ಕರದ್ಬಿಟ್ ಸರದಾರ್ ಜನಗೊಳ್ಗೆಲ್ಲಾ
ಪ್ರಸ್ನೆ ಆಕ್ದಾಂತೆ
"ತೆರಿಗೇ ಆಕ್ತೀನ್ ಬಾಳಾ ಬಾಳಾ
ಕಾಸೆಲ್ ಓಗ್ತೈತೆ?
ವರಸ್ದಿಂದ ವರ್ಸ ವರಮಾನ್ಸೆಲ್ಲ
ಕಮ್ಯಾಕ್ ಆಗ್ತೈತೆ?"

ಆವಾಗೊಬ್ಬ ಮುದ್ಕ ಸರ್ದಾರ್
ಝುಟ್ನೆ ಎದ್ನಂತೆ
"ಅದೆಂಗೇಂತ ನಾನೇಳ್ತೀನಿ"
ಅಂದ್ಬಿಟ್ ಒರಟ್ನಂತೆ—

ದ್ವಡ್ಡೊಂದ್ ಇಮದ್ಗಡ್ಡೇನ್ತಂದು
ಮ್ಯಾಗೆತ್ತಿಡ್ದಾಂತೆ
ಆಮ್ಯಾಗದನ್ನ ಪಕ್ದೋನ್ ಕೈಗೆ
ಕೊಟ್ಬಿಟ್ ಅಂದ್ನಂತೆ—

"ಒಬ್ರ ಕೈನಿಂದ್ ಒಬ್ರ ಕೈಗೆ
ಓಗ್ಲಿ ಇಮದ್ಗಡ್ಡೆ
ಕೊನೀಗೋಗ್ಲಿ ದ್ವರಗೊಳ್ ಕೈಗೆ
ಈ ದ್ವಡ್ ಇಮದ್ಗಡ್ಡೆ"

ಅಂಗೇ ಓಯ್ತು ದೊರೆ ತಂಕಾ
ಕೈನಿಂದ್ ಕೈಗೆ ಸಾಗ್ತಾ
ದೊರೆ ಅದನ್ ಯಿಡಕೊಂಡ್ ನಿಂತ
ತಾನ್ ಕಲ್ತ್ ಪಾಟಕ್ ನಗ್ತಾ

ತೆಂಗಿನ್‌ಕಾಯಿನ್ ಗಾತ್ರದ್ಗಡ್ಡೆ
ಅವ್ರೇಕಾಳಾಗಿತ್ತು
ದೊರೆ ಕೈನ ಸೇರೋ ಒತ್ಗೆ
ಅಷ್ಟೊಂದ್ ನೀರಾಗಿತ್ತು!

—ಅಳ್ಳೀಗಮಾರ.

# ಯಾತ್ರಿಕನ ಪತ್ರ

(೧೬)

ಓದುಗರಲ್ಲಿ ವಿಜ್ಞಾಪನೆಗಳು. ಹೋದಸಾರಿ ನಮ್ಮ ಚಂದಿಗೆ ಪತ್ರ ಬರೆಯುವಂತೆ ಹೇಳಿ ಅವನ ಮತ್ತು ರಾಜನ ಕಾಟದಿಂದ ವಿಶ್ರಾಂತಿ ಪಡೆದೆ. ಹೋಗುವಾಗ ಚಂದಿಗೆ ಯಾವ ತಪ್ಪುಮಾಡಬಾರದೆಂದು ಎಚ್ಚರಿಸಿದ್ದೆನೋ ಆತ ಅದೇ ತಪ್ಪನ್ನು ಚಾಚೂತಪ್ಪದೆ ನಾಜೂಕಾಗಿ ಮಾಡಿದ್ದಾನೆ. ಚಂದಿಯೂ ಮನುಷ್ಯನಲ್ಲವೆ? ನನಗೆ ಚಂದಿಯಲ್ಲಿದ್ದ ಭರವಸೆ ಪೂರ್ತಿಯಾಗಿ ಮಾಯವಾಯ್ತು. ನಿಮಗೆಲ್ಲಾ ಜ್ಞಾಪಕವಿರಬಹುದು — ಹಿಂದೊಂದುಬಾರಿ ಚಂದಿಯು ಸಾಹಿತಿಯಾಗುವ ಚಿಹ್ನೆ ತೋರಿಸುತ್ತಿದ್ದಾನೆಂದು ಬರೆದಿದ್ದೆ. ಆದರೆ ಅವನ ಸಾಹಿತ್ಯವೆಲ್ಲಾ ಪತ್ತೇದಾರಿ ಕಾದಂಬರಿಗಳಲ್ಲಿ ಇಳಿಯುತ್ತೆಂದು ಭಾವಿಸಿರಲಿಲ್ಲ. ಹಿಂದೆ ನಮ್ಮ ಹಿರಿಯರು ಬರೆದ ಕಾವ್ಯಗಳನ್ನೆಲ್ಲಾ ಈಗ ನಾವು ನಮ್ಮ ಸಂಸ್ಕೃತಿಯೆಂದು ಹೆಮ್ಮೆಪಡುತ್ತಿದೇವೆ. ಈಗ ಚಂದಿಯಂಥವರು ಬರೆಯುತ್ತಿರುವ ಕಾದಂಬರಿಗಳನ್ನು ಮುಂದೆ ಬರುವ ನಮ್ಮ ಕಿರಿಯರು ಓದಿದರೆ, ರಾಮಾಯಣ, ಮಹಾಭಾರತ, ಭಗವದ್ಗೀತೆಗಳನ್ನು ನಮ್ಮವರೆಂದಿಗೂ ರಚಿಸಿಲಾರರೆಂದೇ ಭಾವಿಸುವರು. ಸಾಹಿತ್ಯಕ್ಕೂ ಶನಿಕಾಟ ಹಿಡಿದಿದೆಯೆಂದೇ ನನ್ನ ಭಯ. ಇನ್ನು ಚಂದಿಯ ವೇದಾಂತ! ಎಲ್ಲೂ ಬಾಳದಮೇಲೆ ಬರುವ ವೈರಾಗ್ಯ! ನಮ್ಮ ಹಿಂದಿನವರೇ ನಮ್ಮಲ್ಲಿ ಹೇರಳವಾಗಿ ವೇದಾಂತವನ್ನು ಬಿಟ್ಟುಹೋಗಿದ್ದಾರೆ. ಈಗಲೂ ಹೇರಳವಾಗಿ ತಯಾರಾಗುತ್ತಿದೆ. ಆದರೆ ಇತರ ಪಾಪಿಷ್ಟ ದೇಶಗಳು ಈ ವೇದಾಂತಕ್ಕೆ ಮನ್ನಣೆಕೊಡದೆ ತಮ್ಮ ತಮ್ಮ ಜನಾಂಗಕ್ಕೆ ಸಾಕಷ್ಟು ಅನ್ನಬಟ್ಟೆ ಒದಗಿಸಿ ಅವರ ಆರೋಗ್ಯ ಐಶ್ವರ್ಯಗಳನ್ನು ಹೆಚ್ಚಿಸುತ್ತಲೇ ಇದ್ದಾರೆ. ನಾವೂ ಆ ದೇಶಗಳಿಂದ ಆಹಾರ ಬಟ್ಟೆ ಸಾಮಾನು ಸರಂಜಾಮುಗಳನ್ನು ಕೊಳ್ಳುತ್ತಲೇ ಇದ್ದೇವೆ. ನಮ್ಮ ವೇದಾಂತವನ್ನು ಮತ್ಯಾರಿಗೂ ಮಾರಲಿಕ್ಕಾಗದೆ ಅದು ನಮ್ಮಲ್ಲಿಯೇ ಕೊಳೆಯುತ್ತಿದೆ — ಅಷ್ಟೇ ಅಲ್ಲ — ಜಡವಾಗಿ ನಿಂತು ನಮ್ಮಮೇಲೆ ಬರುಬರುತ್ತ ದಾರಿದ್ರ್ಯವನ್ನೇ ಹೊರಿಸುತ್ತಿದೆ. ಅದೇನು ವೇದಾಂತವೇ ತಪ್ಪೋ, ಅಥವಾ ವೇದಾಂತದ ಅರ್ಥವೇ ಬದಲಾಯಿಸುತ್ತಿದೆಯೋ, ಅಥವಾ ನಮ್ಮ ಗತವೈಭವಗಳ ಜೊತೆಗೆ ನಮ್ಮ ನಿಜವಾದ ವೇದಾಂತವೂ ಹೊರಗಿನವರ ಪಾಲಾಗಿ ಹೊಟ್ಟು ಮಾತ್ರ ನಮ್ಮ ಕೈಲಿದೆಯೋ — ಯಾವುದೂ ನನಗರ್ಥವಾಗುವುದಿಲ್ಲ. ಚಂದಿಯನ್ನೇ ಕೇಳಬೇಕು.

ಹೋಗಲಿ — ನನಗೆ ಪತ್ತೇದಾರಿಕೆ ಮತ್ತು ವೇದಾಂತಗಳಿಂದ ನಿಮ್ಮನ್ನು ಮತ್ತೂ ಕಾಡಿಸುವುದಕ್ಕೆ ಇಷ್ಟವಿಲ್ಲ. ರಾಜ ಚಂದಿ ಇಬ್ಬರನ್ನು ಬಿಟ್ಟು ನಾನು ಸುತ್ತಮುತ್ತ ಪ್ರದೇಶ ಸುತ್ತಲು ಹೊರಟೆ, ಕಾಲುನಡಿಗೆಯಲ್ಲೇ "ಕುಗ್ಗೂರು" ಸೇರಿದೆ. ಕುಗ್ಗೂರಿಗೆ ಇನ್ನೂ ಎರಡು ಫರ್ಲಾಂಗ್ ದೂರವಿರುವಾಗ ನನ್ನ ಬಲಗಾಲಿನ ಚಪ್ಪಲಿಯ ಪಟ್ಟಿ ಹಠಾತ್ತನೆ ಕಿತ್ತುಹೋಯಿತು ನಾವು ಈ ಯಾತ್ರೆ ಶುರುವಿನಲ್ಲಿ ಮೈಸೂರು ಬಿಟ್ಟಾಗ ಯೋಚನೆಮಾಡಿ, ಈ ತರಹ ಸಂಕಟ ಒದಗಬಹುದೆಂದು, ಮೂರುತೊಲ ಸಣ್ಣಮೊಳೆ, ಒಂದು ಸುತ್ತಿಗೆ ಕೊಂಡಿದ್ದೆವು. ಚಂದಿಯೇನೋ ಆಗ ಸ್ವಲ್ಪ ಧಾರ ಮತ್ತು ಒಂದು ಮೋಚಿಯ ಸೂಜಿಯನ್ನೇ ಇಟ್ಟುಕೊಳ್ಳೋಣವೆಂದು ಹೇಳಿದ. ಆದರೆ ರಾಜ ಒಪ್ಪಲಿಲ್ಲ. ರಾಜನದು ಸ್ವಲ್ಪ ಬಹಿಷ್ಕಾರ ಮನೋಭಾವ. ನನಗರ್ಥವಾಗದು—ನಾವು ಸ್ವಯಂ ಮುಖಕ್ಷೌರಮಾಡಿಕೊಳ್ಳುವುದರಿಂದ ಹಜಾಮ ರಾಗದವರು, ನಮ್ಮ ಚಪ್ಪಲಿ ಹೊಲಿದುಕೊಂಡರೆ ಚಮ್ಮಾರರಾಗುವೆವೇ? ನಾನೇನೂ ಮಾತನಾಡಲಿಲ್ಲ ಆಗ ಅವರಿಬ್ಬರೇ ಹೊಡೆದಾಡಿ ಕೊನೆಗೆ ಮೂರುತೊಲ ಸಣ್ಣಮೊಳೆ ಒಂದು ಸುತ್ತಿಗೆ ಕೊಂಡಿದ್ದರು. ಅವು ಇದುವರಿವಿಗೂ ಯಾವ ಉಪಯೋಗಕ್ಕೂ ಬಂದಿರಲಿಲ್ಲ. ಕಿರಲುಕೋಡಿನಲ್ಲಿ ಮಾತ್ರ ದೇವಸ್ಥಾನದ ಶಿಲ್ಪಿಕೆಲಸ ಪರೀಕ್ಷೆಮಾಡೋ ಕೆಂದು ರಾಜ, ಆ ಸುತ್ತಿಗೆಯಲ್ಲಿ ದೇವಸ್ಥಾನದ ಗೋಡೆಗೆ ಎರಡೇಟು ಹೊಡೆದಿದ್ದ. ಎರಡುಸಾರಿಯೂ ಒಂದೊಂದು ಚದುರಮೊಳದಷ್ಟು ಗೋಡೆ ನೆಲಕ್ಕೆ ಬೀಳಲು ಚಂದಿ ಆ ಸುತ್ತಿಗೇನ ರಾಜನ ಕೈಯಿಂದ ಕಿತ್ತುಕೊಂಡು ಚೀಲಕ್ಕೆ ಹಾಕಿದ್ದ. ಆಮೇಲೆ ಹೊರಗೆ ತೆಗೆಯಲೇ ಇಲ್ಲ. ಈಗ ಕುಗ್ಗೂರಿನಲ್ಲಿ ಆ ಮೊಳೆ ಸುತ್ತಿಗೆ ಬೇಕಾದವು. ಚಂದಿ ರಾಜ ಇಬ್ಬರೂ ನನಗೆ ಬೇಕಾದರು. ಅವರಿಬ್ಬರನ್ನು ಬಿಟ್ಟು ಬಂದುದು ನನಗೆ ವ್ಯಥೆಯಾಯಿತು. ನನ್ನನ್ನು ನಾನೇ ಶಪಿಸುತ್ತ ಹರುಕು ಚಪ್ಪಲಿಯನ್ನೂ, ಒಂಟಿ ಚಪ್ಪಲಿಯನ್ನೂ ನನ್ನ ಕೈಲಿಟ್ಟುಕೊಂಡು ಕುಗ್ಗೂರು ನುಗ್ಗಿದೆ.

ಕುಗ್ಗೂರಿನಲ್ಲಿ ಅತಿಮುಖ್ಯಸ್ಥನೆಂದರೆ ಮೋಚಿ — ನನಗೆ. ಮೋಚಿಯನ್ನು ಹುಡುಕುತ್ತ ಹೊರಟೆ. ಇಡೀ ಊರಲ್ಲಿ ಒಬ್ಬ ಮೋಚಿ ಸಿಗಲಿಲ್ಲ. ನನ್ನ ಚಪ್ಪಲಿ ಗಳೆರಡನ್ನೂ ಯಾವುದಾದರೊಂದು ಭಾವಿಯಲ್ಲಿ ಹಾಕುವಷ್ಟು ಬೇಸರವಾಯ್ತು. ಭಾವಿಯನ್ನು ಹುಡುಕುತ್ತ ಹೊರಟೆ. ಒಂದು ಭಾವಿ ಸಿಕ್ಕಿತು. ಆದರೆ ಅದರ ಸುತ್ತ ಏಳೆಂಟುಮಂದಿ ನಿಂತು ಏನೋ ಚರ್ಚೆಮಾಡುತ್ತಿದ್ದರು. ನನ್ನನ್ನೂ ನನ್ನ ಕೈಯನ್ನೂ ನೋಡಿ ಚರ್ಚೆ ಬಂದಾಯಿತು. ನನ್ನ ಚಪ್ಪಲಿಗಳನ್ನು ಕೆಳಗೆಹಾಕಿ ಗಂಭೀರವಾಗಿ ನಿಂತೆ.

"ಯಾವೂರು ಸ್ವಾಮಿ?" ಅಂದ ಒಬ್ಬ.

ಆದಷ್ಟು ಮನಸ್ಸೊಪ್ಪುವಹಾಗೆ ನನ್ನ ವೃತ್ತಾಂತ ಹೇಳಿದೆ.

ಮತ್ತೊಬ್ಬ "ಬಹಳ ಸಂತೋಷ ಸ್ವಾಮಿ. ತಮ್ಮಂತಹ ದೇಶ ತಿರಿಗಿದವರು ನಮ್ಮೂರಿಗೆ ಬರ್ಬೇಕು" ಅಂದ ನನ್ನ ಕಾಲುಗಳು ಹರುಕು ಚಪ್ಪಲಿಗಳನ್ನು ಆಡಿಸುತ್ತಿದ್ದವು.

"ಇದೇನು—ಈ ಭಾವಿಯು ರಿಪೇರಿಯಾಗುತ್ತಿದೆಯೇನು?" ಅಂತ ಕೇಳಿದೆ.

"ಹೌದು ಸ್ವಾಮಿ" ಅಂದ.

"ನಿಮ್ಮೂರಲ್ಲೆಷ್ಟು ಭಾವಿಗಳಿವೆ" ಅಂತ ಕೇಳಿದೆ.

"ಇರುವುದಿದೊಂದು ಭಾವಿ" ಅಂದ.

ನನ್ನ ಹರುಕು ಚಪ್ಪಲಿಗಳನ್ನು ಕಾಲಿಗೆ ಸೇರಿಸಿದೆ.

"ಹಾಗಾದರೆ ಇಲ್ಲಿನ ಜನಸಂಖ್ಯೆ ಎಷ್ಟು" ಅಂದೆ.

ಮತ್ತೊಬ್ಬ "ಹನ್ನೆರಡು ಮನೆ, ನೂರೈವತ್ತು ಗುಡಿಸಲು, ಏಳುನೂರು ಜನ, ಮುನ್ನೂರು ಜಾನುವಾರು" ಅಂತ ಬಾಯಿಪಾಠಮಾಡಿದಹಾಗೆ ಹೇಳಿದ. ಅವನು ಹೇಳಿದ್ದ ರೀತಿಯಲ್ಲಿ ಪ್ರಾಯಶಃ ಅವನು ಮಂತ್ರಿಗೋಳಿಗೆ, ಅಧಿಕಾರಿಗೋಳಿಗೆ, ನೌಕರಗೋಳಿಗೆಲ್ಲಾ ಆ ಊರಿನ ಗೋಳುಗಳನ್ನು ಹೇಳೀ ಹೇಳೀ ಗಿಣಿಪಾಠವಾಗಿರಬೇಕು!

ನನಗಾಶ್ಚರ್ಯವಾಯ್ತು

"ಇದೇಕಪ್ಪ? ಸರ್ಕಾರಕ್ಕೆ ಅರ್ಜಿ ಬರೆದು, ಭಾವಿ ತೋಡಿಸೊಕೇಂತ ಹಣ ಪಡೀಬಹುದು. ಅದರಲ್ಲಿ ನಿಮ್ಮ ಊರಿಗೆ ನೀರಿನ ಸೌಕರ್ಯಮಾಡಿಕೊಬಾರದೇ?" ಅಂತ ನಾನು ಕೇಳಿದೆ.

ಅದಕ್ಕಾತ "ಹೌದು ಸ್ವಾಮಿ—ಅವೆಲ್ಲಾ ತಕರಾರುಗಳು ಮುಗಿದಮ್ಯಾಗೇನೇ ಈ ಭಾಮೀನ ಸರಿಮಾಡ್ತಿರೋದು. ಒಂದೊಂದ್ಭಾಮೀಗೆ ಸಾವಿರ್ರೂಪಾಯ್ನಂಗೆ ಕೊಡ್ತೀವೀಂದ್ರು. ನಾವ್ರೂ ಮೂರು ಭಾಮೀಗೆ ಅರ್ಜಿಹಾಕ್ದೋ. ಕಾಗಜದ ಮ್ಯಾಗೆಲ್ಲಾ ನಮ್ಮೆಬ್ಬೆಟ್ಟಾಕುಸ್ಕೊಂಡೋದ್ರು. ದುಡ್ಡು ಕೊಟ್ಟಾಯ್ತು ಅನ್ನಿದರು. ಆ ಮೂರು ಸಾವಿರ್ರೂಪಾಯಿ ಮೇಲಿಂದ ಕುಂಟ್ಕೊಂಡು ಕುಂಟ್ಕೊಂಡು ನಮ್ಮಳ್ಳೀಗೆ ಸೇರೋಹೊತ್ಗೆ ಮಾಮೂಲಗಳೆಲ್ಲಾ ಕಳ್ಕೊಂಡು ಇನ್ನೂರಾಯ್ತು. ಬಿಟ್ರೆ ಅದೂ ಓಗ್ತಿತ್ತು. ಅದ್ನೇ ಹಿಡ್ಕೊಂಡೊ. ಇಕ್ಕೊ—ಈ ಭಾಮಿನೇ ಯಂಗಾರಾ ಆಗ್ಲೀಂತ ಸರಿಮಾಡಿಸ್ತಿದ್ದೀವಿ" ಅಂದ.

ಇನ್ನು ನನ್ನ ಚಪ್ಪಲಿಗಳನ್ನು ಸರಿಪಡಿಸಲೇಬೇಕಾಯ್ತು. ಇದ್ದ ಒಂದು ಭಾವೀಲಿ ನನ್ನ ಚಪ್ಪಲಿ ಹಾಕಿ ಪಾಪವೇತಕ್ಕೆ ಕಟ್ಟಿಕೊಳ್ಳಲಿ ಅನ್ನಿಸಿತು. ಆವರೂ ಅದನ್ನು ಸಾಗಿಸಿಕೊಂಡು ಹೋಗುವುದಾದರೂ ಹೇಗೆ? ಉಭಯಸಂಕಟ!

" ಈ ಊರಲ್ಲಿ ಒಬ್ಬ ಮೋಚಿ ಇದ್ದಾನೋ" ಅಂತ ಕೇಳಿದೆ.

" ಯಾಕೆ ಸ್ವಾಮಿ?" ಅಂತ ಒಬ್ಬ ಕೇಳಿದ–ತುಸ ಗಾಭರಿಯಾಗಿಯೇ ಕೇಳಿದ.

" ಯಾಕಿಲ್ಲಪ್ಪ—ಈ ಚಪ್ಪಲಿ ಒಂದು ಕಿತ್ತುಹೋಗಿದೆ. ಒಂದೆರಡು ಹೊಲಿಗೆ ಹಾಕಿಕೊಡಬೇಕಾಗಿತ್ತು" ಅಂದೆ.

ಅದಕ್ಕವನು "ಮೋಚಿಯೇನೋ ಒಬ್ಬನಿದ್ದ ಸ್ವಾಮಿ. ಆದರೆ ಈಗವ ಪಟ್ಟಣ ಸೇರಿ ತಲೆತಪ್ಪಿಸಿಕೊಂಡವ್ನೆ" ಅಂದ.

" ಅದೇಕಪ್ಪ? ಇಲ್ಲಿ ಅವನಿಗೇನು ಜೀವನ ನಡೀಲಿಲ್ವೆ?" ಅಂದೆ.

ಅದಕ್ಕವನು "ನಡೀದೇ ಏನು ಸ್ವಾಮಿ—ಅವನ ಜೀವನ ಸಂಕೋಚಿಲ್ದೆ ಆಗ್ತಿತ್ತು. ನಮ್ಗೂ ಬೇಕಾದಾಗ ಕಾಲಿಗೆ ಸಿಕ್ಕಿಸ್ಕೊಳ್ಳಾಕ ಜೋಡು ಸಿಕ್ತಿತ್ತು. ಆದ್ರೆ ಅದೇನೋ ಅಳ್ಳ್ಯಗೆಲ್ಲಾ ಕೈಕಾಣಿಕೆನಂತೆ—ಆ ಕೈಕಾಣಿಕೆ ಜನ ಬಂದ್ರು—ಲೋ ಚಿಕ್ಕಾ—ನೀನೇ ಯೇಳೋ ಸ್ವಾಮಿಯೋರ್ಗೆ" ಅಂತ ಪಕ್ಕದಲ್ಲಿದ್ದ ಚಿಕ್ಕನಿ ಗೊಪ್ಪಿಸಿದ.

ಚಿಕ್ಕ ಹೇಳಿದ "ಅದೇಸ್ವಾಮಿ—ಮನ್ಯಾಗೆಲ್ಲಾ ಕಸುಬು–ಗ್ರಹಕೈಕಾರಿಕೆ!—ಅದು ಉದ್ಧಾರಮಾಡ್ತೀವೀಂಬ್ರ ಓಟೊಂಜನ ಬಂದ್ರು. ನಮ್ಮೋಚಿ ಸಿಕ್ದ ಅವರ್ಗೆ. ಅವನನ್ನ ಪುಸ್ಲಾಯ್ಸಿ 'ನಿಂಗೆ ಮೂರ್ಸಾವಿರ್‍ರೂಪಾಯಿ ಕೊಡಿಸ್ತೀವಿ ನಾವು ಬಂದಾಗ್ನೆಲ್ಲಾ ಒಂದೀಟುಜೊತೆ ಜೋಡುಗಳ್ನ ನಮ್ಗೆ ತೋರಿಸ್ಬಿಡು ಮುಂದಿನಕೆಲ್ಸ ನಾವ್ನೋಡ್ಕಂತೀವೀ'ಂತ ಆ ಮೋಚೀತ್ರಾನೂ ಅವನೆಬ್ಬೆಟ್ಕೊತ್ತಿಸ್ಕಂಡ್ರು. ನಾವೆಲ್ಲಾ ತಿಳ್ಕೊಂಡೊ—ನಮ್ಮ ಕೂಕ್ರಂಗೆ ದೆಸೆ ಒಡೀತೂಂತ. ದುಡ್ಡೂ ಬಂತು. ಕೂಕ್ರ ಒಂದೆಳ್ಡು ತಿಂಗ್ಳು ಅಗಲೂ ಸಂಜೆ ಒಲ್ದ. ಆಮ್ಯಾಕೆ ಆ ಕೈಗಾರಿಕೆಯೋರ ಕಾಟ ತಡೀನಾರ್ದೆ ಕಂಬೀಕಿತ್ತ" ಅಂತ ಹೇಳಿ ಮುಗಿಸಿದ.

ನನಗೆ ಕುತೂಹಲ ಹೆಚ್ಚಿತು.

" ಹೋಗಲಿ—ಕೂಕ್ರಂಗೆಷ್ಟು ಹಣ ಸಿಕ್ತು?" ಅಂದೆ.

ಚಿಕ್ಕ ಹೇಳಿದ—"ಏಟೊಂಪೂಂಬ್ರ ನಂಗೇನು ಗೊತ್ತು? ಆದ್ರೆ ಅವನಿಗೆ ಜಾಗ ಕೊಟ್ಟಿದ್ದ ಪುಟ್ಟಾಚಾರಿ ಹೇಳ್ತಿದ್ದ—ಐವತ್ತೋ ಐವತ್ತೊಂದೋ ಸಿಗ್ತೂಂತ. ಅದರಾಗೆ ಪುಟ್ಟಾಚಾರಿ ತನಗೆ ಬಾಡ್ಗೆ ಬಾಬ್ತೂಂತ ಕೂಕ್ರನತ್ರ ಕಿತ್ಕೊಂಡಿದ್ದ. ಆ ದುಡ್ಡು ಕೊಡಿಸ್ದೋರು ಅವರು ಕೊಡಿಸಿದ್ದುಡ್ಗೆ ಕೂಕ್ರನತ್ರ ಇದ್ದ ಜೋಡೆಲ್ಲಾ ಆಕ್ಕೊಂಡೋದ್ರು" ಅಂತ ಹೇಳಿದ.

ನನಗೆ ಎಚ್ಚರವಾದಾಗ ನಾನು ಕೈಯಲ್ಲಿ ಚಪ್ಪಲಿಗಳನ್ನು ಹಿಡಿದು ಕಾಲಲ್ಲಿ ಬಂದ ದಾರಿ ಹಿಡಿದಿದ್ದೆ.

—"ಕೇಘ"

# ಅರಾಸೆಯ ಒಸಗೆ

—: ನಿರುದ್ಯೋಗ ಖಂಡ:—

ನರಕದ ಚತುರ್ದಶಿಯು ಹಬ್ಬ! ಹಸಿವಾಗಿತ್ತು
ಕತ್ತಲದು ಲೋಕವನು ಮುತ್ತಲಿತ್ತು
ಕಾಲುದಾರಿಯುಲಲೆದು ಪಾರ್ಕಿನಲಿ ಕುಳಿತಿದ್ದೆ
ಕಲ್ಲು ಬೆಂಚಿನಲಲ್ಲೆ ಇದ್ದರೇಸೊ ಜನ. — ೧ —

ಪುರುಷಾವತಾರಗಳು ಭಾರತೀ ಸುತರವರು
ಮೂವತ್ತು ಮೂರು ಕೋಟಿಯು ಅಂಶದವರು
ಹರಟೆ ಹೊಡೆವರು ಕೆಲರು, ಮೂಕರುಳಿದವರೆಲ್ಲ
ಚಿಂತೆಯಾಬೆಂತರದ ಇರವ ಕಂಡವರು. — ೨ —

ಪೇಳ್ದನವರೊಳಗೊಬ್ಬ "ನನ್ನ ಸೃಷ್ಟಿಸಿದವನು
ಬೆಳಿಸಿ ಡಿಗ್ರಿಯು ಕೊಡಿಸಿ ಇಟ್ಟಿರುವನಿಂತು
ಕೆಲಸ ದೊರೆಯದು ನನಗೆ, ಸಿಗದಿದ್ದರೊಳಿತಾಯ್ತು
ಕೋಟಿಜನರೆನ್ನಂತೆ ಏಟ ತಿನುತಿಹರು. — ೩ —

ಇನ್ನೊಬ್ಬ ನಿಂತೆಂದ "ಬೆಪ್ಪೊ ಹುಚ್ಚೋ ನಿನಗೆ
ಎರಡು ಸಾವಿರ ಕೋಟಿಯನು ಖರ್ಚುಮಾಡಿ
ಪಂಚವಾರ್ಷಿಕದಿ ತೊಡಗಿಹುದೆಮ್ಮ ಸರಕಾರ
ಲಂಚಕೊಟ್ಟರೆ ಕೆಲಸ ಕರತಲಾಮಲಕ. — ೪ —

ಚಣಕಾಲವಮೌನ ಬಾಯ್ತೆರೆದನೊಬ್ಬನು ಬಚ್ಚ
ಭಿಕ್ಷಾನ್ನ ಸಂಘಕ್ಕವನೆ ಕಾರ್ಯದರ್ಶಿ
"ಗೂನನಾದೆನು ನಾನು ಘಸ್ಸಿ ಮುಹಮುದ ಶಿಷ್ಯ
ಮೂರು ಪಾರ್ಟಿವೆ, ಮೇಷ್ಟರಿಗೆ ದಯೆಯೆ ಇಲ್ಲ" — ೫ —

ಮತ್ತೊಬ್ಬನಿಂತೆಂದ ತಲೆಹರಟೆ, ಕಮ್ಯುನಿಸ್ಟ್
ಇರಬಹುದು "ಲೋಕಕಾರ್ಮಿಕರೇ ಒಂದಾಗಿ!
ತಲೆಕೆಳಕು ಜಗದಲ್ಲಿ ಕುಣಿತಕ್ಕೆ ಬೆಲೆಯಿಲ್ಲ
ಹಿಡಿದು ಸುತ್ತಿಗೆಯು ಕುಡುಗೋಲು ಹೊರ ಹೊರಡಿ" — ೬ —

ಕುಳಿತು ಕೇಳುತಲಿದ್ದ ನಾನೆಂದೆ "ಮಿತ್ರರಿರ
ಹಾಳಾಗಲಿಹುದ ಜಗ ಚಿಂತಿಸುವಿರೇಕೆ
ಕಾಫಿ ಬಟ್ಟಲನೆತ್ತಿ ತುಟಿಗೆ! ಒಣಗಿದದೇಹ
ಚೇತನವಕಾಣುವುದು. ಸಾಕು ಮಾತು" — ೭ —

* *

ನೀಂಕುಡಿವ ಕಾಫಿಯುಂ, ಸೇದುತಿಹ ಬೀಡಿಯುಂ
ವ್ಯರ್ಥ, ನಶ್ವರ, ಬರಿಯ ವೆಚ್ಚವೆನ್ನುವೆಯಾ?
ಕಾಫಿಯನು ಕುಡಿವುದಂ, ಸಿಗರೇಟ ಸುಡುವುದಂ
ಬಿಡಲು ಬಾಳ್ ಪಾಳಾಗೆ ಉಳಿವುದೇಂ ಪೇಳು? — ೮ —

ಹಿಂದೆನಿತೊ ಬಾರಿನಾ ಪಾಪಿಯೆಂದಳಲಿದೆನು
ಅಂದೆನ್ನ ಜೇಬಿನಲಿ ಮೂರು ಕಾಸಿತ್ತೇ?
ಮುಂದೆ ಸಿಕ್ಕಿತು ಸಾಲ, ಚೆಂದದೀ ಕಾಫಿ ಮನ
ದಂದವನು ಕೆಡಿಸಲನುತಾಪ ಹುಡಿಯಾಯ್ತು — ೯ —

ಪೋಪುದೇ ಕಾಫಿಯೊಡನಯ್ಯೊ ಸಿಗರೇಟ ಹೊಗೆ
ಮುಗಿವುದೇ ಯೌವನದ ನವ್ಯಕಾವ್ಯವಿದು
ಏಕೆ ಈ ಗಂಭೀರತೆಯು ಮೌನ. ಲತ ತಲತರೆಲ್ಲಿ
ಪೋದರು? ಪಾಳ್ ಕರೆಂಟು ಫೆಯಿಲಾಯ್ತೇ. — ೧೦ —

ಮನದನ್ನೆ ಸಾವಿರ್ವರುಂ ಬಿದಿಯ ಬೇರಿರಿಸಿ
ದುಃಖಮಯದೀ ಬಾಳ ಪೊಸತ ಗೈಯುವೊಡೆ
ಕಾಫಿಹೊಳೆಯನು ಹರಿಸಿ, ತಾಲಿಪಿಟ್ ಪರ್ವತವಗೈದು
ಪೊಸ ಸೃಷ್ಟಿಯನುದಿರವಿಸುವೆವಲ್ತೇ — ೧೧ —

ಆಹ! ಕುಂದಿನಿಸಿಲ್ಲದೆನ್ನ ರಾಣಿಯ ಬಾರ,
ಆಗಸದಿ 'ಝಾನ್ಸಿರಾಣಿ'ಯು ಹಾರುತಿಹಳು,
ಇನ್ನೇಸುದಿನ ಅವಳು ಪೃಥ್ವಿಯನು ಸುತ್ತುವಳು
ಬೇಗ ಮಾನವರ ಕುಲ ನಾಶವಾಗುವುದು — ೧೨ —

ಆ ದುರ್ದಿನದಿ ಮುಗುದೆ ಹಾರುತಟ್ಟೆಯನೇರಿ
ಬೇರೊಂದು ಗ್ರಹವ ಸಾರುತಲಲ್ಲಿ ನೆಲಸಿ
ಸೂರೆ ಗೈವೆವು ಪ್ರೇಮ ಸಾಮ್ರಾಜ್ಯ ಭವನವನು,
ಆರೀತು ಕಾಫಿ; ಬಟ್ಟಲನು ತಾ ಬೇಗ. — ೧೩ —

ತಮಾಮ್ ಶುಧ್

—ಅ. ರಾ. ಸೇ.

# ಒಂದು ದಿನ

ಬಸಮ್ಮ ಕೆಲಸಕ್ಕೆ ಬರದೆ ಒಂದು ವಾರವಾಗಿದ್ದರಿಂದ ಮನೆಯಲ್ಲೆಲ್ಲಾ ಕಸ, ಸಾಮಾನುಗಳು ಇಟ್ಟಾಡುತ್ತಿದ್ದವು. ನಮ್ಮ ಹುಡುಗರು ಸೋಮಾರಿಗಳೆಂತಲ್ಲ. ಆರು ಜನರಿದ್ದರೂ ಆಗಾಗ ನಿಶ್ಶಬ್ದವಾಗಿರುತ್ತಾರೆ. ದಿನಕ್ಕೆ ಒಂದೆರಡು ನಿಮಿಷ ಓದೂ ಓದುತ್ತಾರೆ. ಸ್ನೇಹಿತರುಗಳನ್ನು ಸೇರಿಸಿ ಅವರಿಗೆ ತಿಂಡಿ ಹಂಚುವುದರಲ್ಲಿ, ಅವರಿಂದ ಸಿನಿಮಾ ಹಾಡುಗಳನ್ನು ಹೇಳಿಸುವುದರಲ್ಲಿ ನಮ್ಮ ಹುಡುಗರಿಗೆ ಬಹಳ ಆಸಕ್ತಿ. ಹೀಗಿರುವಲ್ಲಿ ಬಸಮ್ಮ ಬರದೆ ಮನೆ ತಿಪ್ಪೆಯಾಗಿದ್ದು ಏನೂ ಆಶ್ಚರ್ಯವಲ್ಲ.

ಒಗೆಯದ ಬಟ್ಟೆಗಳು ರೂಮಿನ ತುಂಬಾ ಗಿರಿ ಹರಡಿದ್ದ. ಅವರಮ್ಮ ಅದರ ವಿಶಯವೆತ್ತಿದ್ದಕ್ಕೆ—'ಹೋಗಮ್ಮ ನಾನು ಬಿ. ಇ ಓದುತ್ತಿದೀನಿ ಕ್ರಿಕೆಟ್ ಮ್ಯಾಚ್ 'ಅಂಪೈರ್' ಆಗಿದ್ದೀನಿ ಅನ್ನೊದೇ ಮರೆತು ಹೋಗುತ್ತೆ ನಿನಗೆ' ಎಂದು ಬಾಯಿ ಮುಚ್ಚಿಸಿದ್ದ. ಸರಿ, ಇನ್ನು ರೂಮುರೂಮಿನಲ್ಲೂ ಕಸ, ಒಟ್ಟಿ, ಪುಸ್ತುಕಗಳ ರಾಶಿಗಳು. ಪದ್ದು ಶಾಂತಿ, ಉಷಿಯರ ಒಣಗಿದ ಹೂವುಗಳ ಗುಡ್ಡೆಗಳೇ ಸಾಕಾಗಿದ್ದವು. ಅಡಿಗೆಯ ಮನೆಯಲ್ಲೂ ಒಚ್ಚಲುಮನೆಯಲ್ಲೂ ತೊಳೆಯದೆ ಇದ್ದ ಪಾತ್ರೆಗಳು ಬೇರೆ. ನಮ್ಮಾಕೆ ಕೈಲಾಗುವುದಿಲ್ಲವೆಂದು ಸೀರೆಗಳನ್ನೆಲ್ಲಾ ಒಂದು ದೊಡ್ಡ ಮುದ್ದೆ ಮಾಡಿಟ್ಟಿದ್ದಳು. ನಿನ್ನೆಯದಿನ ಉಷಿಯನ್ನು 'ಕಿಡಿಕಿಯಾಕೇ ತೆಗೆದಿಲ್ಲ' ಎಂದು ಕೇಳಿದರೂ 'ಬಸಮ್ಮ ಬಂದಿಲ್ಲ. ಅಣ್ಣಾ' ಎಂದಳು.

ನಾನೇನೋ ಮಾಡಬಹುದು ಅನ್ನಿ. ಆದರೆ ಏನುಮಾಡುವುದು? ಮನೆ ಗುಡಿಸಲೆ, ಪಾತ್ರೆತೊಳೆಯಲೆ, ಬಟ್ಟೆ ಒಗೆಯಲೆ, ಏನುಮಾಡಲಿ? ಭಾನುವಾರ ಒಂದು ದಿನ ನನಗೆ ಸ್ವಲ್ಪ ವಿರಾಮ ಸಿಕ್ಕುವುದು. ಪ್ರತಿದಿನವೂ ಆಫೀಸಿನಲ್ಲಿ ಸಾಯಬೀಳ ಕೆಲಸಮಾಡಿ ಒಂದು ದಿನ ಆರಾಮವಾಗಿ ಕಳೆಯುವ ಭಾಗ್ಯವೂ ಬೇಡವೇ ನನಗೆ? ಹಾಗೆಯೇ ಆರಾಮ ಕುರ್ಚಿಯನ್ನು ಹಾಸಿಗೆಗಳು, ದಿಂಬುಗಳ ಗುಡ್ಡದಿಂದ ಬಿಡುಗಡೆ ಮಾಡಿ ನನ್ನ ಮಿತಿಯಾದ ಭಾರವನ್ನು ಅದರ ಮೇಲೆ ಹಾಕಿದೆ. ಪೂರ್ತಿಯಾಗಿ ಒರಗುವಷ್ಟರಲ್ಲಿಯೇ ಯಾವುದೋ ಒಂದು ವ್ಯಕ್ತಿ ಶುದ್ಧವಾದ ಪಂಚೆ ಜುಬ್ಬವನ್ನು ಧರಿಸಿ ನಮ್ಮನೆ ಮೆಟ್ಟಲುಗಳನ್ನು ಹತ್ತುತ್ತಿತ್ತು. 'ಯಾರು ಕೇಳೋ' ಎಂದು ನಾಣಿಯನ್ನಟ್ಟಿದೆ. ಅವನು ಬಂದು ಯಾರೊ ನಾಗಪ್ಪ ಅಂತಣ್ಣ ಎಂದ. ನಮ್ಮಾಕೆ ಅಡಿಗೆಯ ಮನೆಯಿಂದಲೇ ಕೂಗುಹಾಕಿದಳು.

'ವೆಂಕಪ್ಪಯ್ಯ ಹೇಳಿದ್ದ ವರನ ತಂದೆ ನಾಗಪ್ಪನೇ ಇರಬೇಕು. ಸದ್ದುಗೆ ಬೇಗ ಜಡೆ ಹಾಕಿಕೋ ಅಂದು ಅವರನ್ನು ಒಳಗೆ ಕರೀರೀಂದ್ರೆ; ನಮ್ಮಾಕೆ ಮಾತಾಡಿದರೆ ನಾನು ಸಾಧಾರಣವಾಗಿ ಒಂದೇ ಒಂದು ಪ್ರಶ್ನೆ ಹಾಕುವುದು—'ನಿನಗೇನು ಹುಚ್ಚೋ, ಬೆಪ್ಪೋ, ಶಿವಲೀಲೇನೋ? ಎಂದು. ಈ ದಿನ ಮನೆ ಇದ್ದ ಅವಸ್ಥೆಯಲ್ಲಿ ಆ ಪ್ರಶ್ನೆಯೂ ನನಗೆ ಮರೆತುಹೋಯಿತು.

ನಾನು ಬೇಗನೆ ಎದ್ದು ಮನೆಗೆ ಬಂದ ವ್ಯಕ್ತಿಯನ್ನು ಒಳಗೆ ಕರೆದು ಆರಾಮ ಕುರ್ಚಿಯನ್ನು ಅಲಂಕರಿಸಬೇಕೆಂದು ಕೋರಿದೆ. ಆತ ಹಿಂದು ಮುಂದು ನೋಡ ತೊಡಗಿದ. ನನಗೇಕೋ ಅವಮಾನವಾಯಿತು. ನಮ್ಮ ಮನೆ ಇದ್ದ ಸ್ಥಿತಿ ಇವನಿಗೆ ಅಸಹ್ಯವನ್ನುಂಟುಮಾಡಿರಬೇಕೆಂದುಕೊಂಡೆ. 'ಈ ಎಲ್ಲ ಅವಸ್ಥೆಗಳಿಗೂ ನಮ್ಮ ಮನೆ ಕೆಲಸದ ಆ ಹಾಳು ಬಸಮ್ಮನೇ ಕಾರಣ ನೋಡಿ. ಆ ಹೆಂಗಸು ಎಲ್ಲಿ ಸತ್ತುಹೋದಳೋ ಗೊತ್ತಿಲ್ಲವಲ್ಲ. ಮನೆಯೆಲ್ಲಾ ಕೊಳಕಾಗಿ ಹೋಗಿದೆ; ಎಂದೆ.

ಮನೆಗೆ ಬಂದ ಆತ ಬಹಳಹೊತ್ತು ನಿಲ್ಲಲಿಲ್ಲ. ಸರಸರನೆ ಬಾಗಿಲಿಗೆ ಹೋಗಿ 'ನಾನು ಬಸಮ್ಮನ ಮಗ. ಬಸಮ್ಮ ಕೆಲಸಕ್ಕೆ ಇನ್ನೂ ಒಂದುವಾರ ಬರುವುದಕ್ಕಾಗುವುದಿಲ್ಲ ಎಂದು ತಿಳಿಸುವುದಕ್ಕೆ ಬಂದಿದ್ದೆ. ಆದರೆ ಇನ್ನೂ ಒಂದು ವಿಷಯ—ಬಸಮ್ಮ ನಿಮ್ಮ ಮನೆ ಕೆಲಸ ಬಿಟ್ಟಿರುತ್ತಾಳೆ' ಎಂದುಕೊಂಡು ಹೊರಟೇಹೋದ.

—ಇಂದುಮತಿ.

---




ಡೇಬರ್ ನನ್ನ ಜತೇಲೇ ಇದ್ದೋರಯ್ಯಾ ಕ್ಯಾಂಪಿನಲ್ಲಿ.
ಇನ್ನುಮೇಲೆ ಕೇಂದ್ರದ ಯೋಚನೆ ನನಗೆ ಬಿಡು!

# ಅರ್ಧಾಂಗಿಯ ಅವಾಂತರ

"ಕೂಗಿದೆ ಯೇನೆ?"

"ಹೌದು ನಿಮ್ಮನ್ನೇ....!" ಎಂದು ಮೆಳ್ಳಗಣ್ಣು ಬೀರಿದಳು ಪಂಕಜ.

"ನನ್ನಲ್ಲದೆ ಇನ್ಯಾರನ್ನ ನೀ ಕೂಗೋದೂ ಯಾತಕ್ಕೆ?"

"ಇದನ್ನ ಓದಿದರಾ .. ಅಂತ ಕೇಳೋಕೆ"

"ಏನದು ಹೇಳಬಾರದೆ"

"ಈ ಪೇಪರ್ನಲ್ಲಿ ಬಂದಿರೋದು! 'ಲಕ್ಷ್ಮೀ ಸಿಲ್ಕ್‌ಹೌಸ್'ನಲ್ಲಿ 'ಸ್ಪೆಷಲ್ ವ್ಯಾಪಾರವಂತೆ' ಸೀರೆಗಳ ಬೆಲೇನ ಅರ್ಧಕ್ಕೆ ಇಳಿಸಿದಾರಂತೆ."

"ಅದಕ್ಕೆ ನನ್ನೇನು ಮಾಡೂಂತಿಯೆ?"

"ಒಳಗಿಟ್ಟಿದೀರಲ್ಲಾ ಮೂವತ್ ರೂಪಾಯಿ... ನನ್ ತಂಗೀ ಮಗ್ಳು ಊರಿಂದ ಬರ್ತಾಳೆ. ಅವಳಿಗ್ಯಾವುದಾದ್ರು ಲಂಗಾಕ್ಕೆ ಬಟ್ಟೇ ತೆಗೆದುಕೊಡೋ ನಾಂತ ಮಾಡಿದೀನಿ.... ಮತ್ತೆ ನಾನೂ.... ಒಂದು ಈ ಅಗ್ಗದ ಸೀರೇನಾ...."

"ಇಲ್ನೋಡೇ ಅದೆಲ್ಲಾ ರಾಗ ಎಳಬೇಡ ನಾನದನ್ನ ಬೇರೆ ಖರ್ಚಿಗೆ ಇಟ್ಕೊಂಡಿದೀನಿ! ಆಪೀಸ್ಗೆ ದಿನಾ ನಡ್ಕೊಂಡ್ಹೋಗೋದು ನಿನಗೆ ಇಷ್ಟವೇನೆ? ಮನೆಯೊಳಗೊಂದ್ಸೈಕಲ್ ಬಿದ್ದಿದೆಯಲ್ಲಾ ಅದ್ನಾ ರಿಪೇರಿ ಮಾಡಿಸೋಣಾಂತಿದೀನಿ"

"ಅಯ್ಯೋ! ಆ ಸೈಕಲ್ಲೇ?...."

"ಅಯ್ಯೋ ಪುಸ್ಯಾ ಅನ್ನಬೇಡ ಏನಾಗಿದೆಯೆ ಅದು? ಮೂವತ್ರುಪಾಯ್ನ ಖರ್ಚು ಮಾಡ್ತೊಂದ್ರೆ ಫಸ್ಟ್ ಕ್ಲಾಸ್ ಸೈಕಲ್ಲಾಗೋಗುತ್ತೆ! "

"ಸುಮ್ನೇ ಅದನ್ನ ಮಾರಂಬಿಟ್ಟು ಬೇರೆ ಸೈಕಲ್ನ ತೊಗೋಳಿ!"

"ಮಾರೋದಕ್ಹೋದ್ರೆ ಯಾವನೂ ತೊಗೋಳೋದಿಲ್ಲ!.... ಆರಕ್ಕೆ ಮೂರರಂತೆ ಕೇಳ್ತಾರೆ ರಿಪೇರಿ ಮಾಡ್ಸಿದರೇ ಸರಿ.... ಅದೆಲ್ಲಾ ಗಂಡಸರ ವ್ಯವಹಾರ ನೀನು ಮೂಗು ಹಾಯಿಸಬೇಡ-ಅಡಿಗೆ ಮನೆಗೆಹೋಗು...."

"ಅಹಹಹಾ.... ಬಲೇಗಂಡಸರು-ಇಲ್ಲಿ ಕೇಳ್ರೀ ಇಲ್ಲೀ.... ಅಲ್ಲಾ ಬಟ್ಟೇಗಳ್ನ ಕಟ್ಟೇ ಬೆಲೆಗ್ಮಾರ್ತಾಯಿರೋ ಕಾಲ್ದಲ್ಲಿ ತೊಗೊಳ್ದೇ, ನಾಳೆ ಹೆಚ್ಚಾದ್ಮೇಲೆ

ತೊಗೋಳೊದಕ್ಕೆ ಸೈಕಲ್ನಾ ರಿಪೇರಿ ಮಾಡಿಸ್ತಾರಂತೆ. ಈಗ್ ನಾನು ಹೇಳ್ದಾಗೆ ಕೇಳಿ. ಈಗ್ ಬಟ್ಟೆ ತೊಗೋಳೋಣ. ಸೈಕಲ್ಲು ಮುಂದಿನ ತಿಂಗಳು."

"ನಿನ್ನ ಜೊತೆ ವಾದಿಸೋನಿಗೆ ಬುದ್ಧಿ ಇಲ್ಲ-ಏನಾದರೂ ಮಾಡ್ಕೊ-ನನಗೆ ಹೇಳಬೇಡ ಆಫೀಸಿಗೆ ಹೊತ್ತಾಯ್ತು "

—ಎಂದು ಭಿರಿಭಿರಿ ಹೊರಟೇಹೋದ ಶ್ರೀನಿವಾಸ.

ಆಫೀಸ್ನಲ್ಲಿ ಶ್ರೀನಿವಾಸನಿಗೆ ಕೆಲಸದಮೇಲೆ ಮನಸ್ಸೇ ಓಡಲಿಲ್ಲ. "ಸೈಕಲ್ ರಿಪೇರಿಗಾಗಿ ಇಟ್ಟಿರೋ ರೂಪಾಯ್ನ ಅನ್ಯಾಯವಾಗಿ ಪಂಕಜ ಖರ್ಚು ಮಾಡ್ತಾಳಲ್ಲಾ" ಇವೇ ಯೋಚನೆಯಲ್ಲಿ ಅವನಿಗೆ ಆಫೀಸಿನಲ್ಲಿ ನಿದ್ರೆಯೇ ಬರಲಿಲ್ಲ

ತಕ್ಷಣವೇ ಶ್ರೀನಿವಾಸನಿಗೆ ಜ್ಞಾಪಕಬಂತು ಪಂಕಜಳಿಗೆ ವಾರಭವಿಷ್ಯದಲ್ಲಿ ಬಹಳ ನಂಬಿಕೆ ಎಂಬುದು ವಾರಭವಿಷ್ಯ ಹೋರಾರತ್ನರ ಒರವಣಿಗೆಯಲ್ಲಿ ಅವಳಿಗೆ ಇದ್ದಷ್ಟು ನಂಬಿಕೆ ಗಂಡನಲ್ಲೂ ಇರಲಿಲ್ಲ.

ಸಾಯಂಕಾಲ ಶ್ರೀನಿವಾಸ ವಾರಪತ್ರಿಕೆ ಕೊಂಡ. ಅದರಲ್ಲಿ ಭವಿಷ್ಯಕಾರರು ಅವನ ಕಾರ್ಯಸಾಧನೆಗೆ ಬೇಕಾದ ಅಂಶವನ್ನೇ ಬರೆದಿದ್ದರು. ಪಂಕಜಳ ರಾಶಿಯಲ್ಲಿ "ನಾಳೆ ಶನಿವಾರ ಸುಮಂಗಲಿಯರಿಗೆ ಒಳ್ಳೆಯ ದಿನವಲ್ಲಾ, ನಾಳೆ ಮುಖ್ಯವಾಗಿ ಯಾವ ಪದಾರ್ಥಗಳನ್ನು ಖರೀದಿಮಾಡಬೇಡಿ" ಎಂದಿತ್ತು. ಅದನ್ನ ಓದಿದಕೂಡಲೆ ಮುಖ ಅರಳಿತು. ಮನೆಗೆ ಬಂದವನೇ "ಲೇ ಇದನ್ನ ಓದಿನೋಡು!" ಎಂದು ಪಂಕಜಳಿಗೆ ಆ ಪತ್ರಿಕೆಯ ವಾರಭವಿಷ್ಯವನ್ನು ತಿಳಿಸಿದ.

ತನ್ನ ರಾಶಿಫಲವನ್ನು ಓದಿದ ಪಂಕಜಾ, "ಇಲ್ಲಾಂದ್ರೆ, ನಾಳೆ ನಾನು ಜವಳೀ ಖರೀದಿಗೆ ಹೋಗೋದಿಲ್ಲ ಕೊಳ್ಳುವುದು ಅಷ್ಟು ಲಾಭಕರವಲ್ಲಾಂತಿದೆ ಇದರಲ್ಲಿ" ಎಂದು ಹೇಳಿದಳು. ನನ್ನ ಉಪಾಯಕ್ಕೆ ನಾನು ಒಳಗೇ ಹಿಗ್ಗಿದೆ. ಸೈಕಲ್ಲು ರಿಪೇರಿ ಮಾಡಿ ಸವಾರಿಮಾಡುವ ಹೊಂಗನಸು ಕಂಡೆ. ಕಿವಿಯಿಂದ ಕಿವಿತನಕ ನಕ್ಕೆ ಅವಳೂ ಮಂದಹಾಸ ಬೀರಿ ಹುಬ್ಬು ಏರಿಸಿ ಮೆಳ್ಳಗಣ್ಣಲ್ಲಿ ನೋಡಿದಳು.

ಶ್ರೀನಿವಾಸ ಮರುದಿನ ನೆಮ್ಮದಿಯಾಗಿ ಆಫೀಸಿಗೆ ಹೋದ. ಭವಿಷ್ಯಕಾರನ ದಯದಿಂದ ನಿಶ್ಚಿಂತೆಯಿಂದ ಆಫೀಸಿನಲ್ಲಿ ನಿದ್ರೆಹೋದ- ಅವನ ಗೊರಿಕೆಯಿಂದ ಇತರ ಗುಮಾಸ್ತೆಗಳ ನಿದ್ರೆ ಭಂಗವಾಯಿತೆಂದು ಟೀಕೆಗೂ ಗುರಿಯಾದ.

ಆದರೆ, ಆಪೀಸ್ ಮುಗಿಸಿ ಕಾಲೆಳೆದು ಬಿಸಿಲಿನಲ್ಲಿ ಬಳಲಿ ಮನೆಗೆ ಮರಳಿದ. ಶ್ರೀನಿವಾಸ, ಹೆಂಡತಿಯ ಬೊಗಸೆ ಮೆಳ್ಳಗಣ್ಣು ನೋಡಿ ಇದೇನು ಇಷ್ಟು ಪರಮ ಖುಷಿ ಇಂದ ಇದ್ದಾಳಲ್ಲಾ ಅರ್ಧಾಂಗೀ ಎಂದು ಅಚ್ಚರಿಪಟ್ಟ. ತೊಗೋಳ್ಳಿ! ಇದ್ನ ನಿಮ್ಮ ಪೆಟ್ಟಿಗೇಲಿ ಇಡಿ" ಎಂದು ಪಂಕಜಾ ಶ್ರೀನಿವಾಸನಿಗೆ ಏಳುರೂಪಾಯಿಗಳನ್ನು ಕೊಟ್ಟಳು.

"ಯಾವುದೀ ರೂಪಾಯಿ?... ಎಲ್ಲಿತ್ತೀ ."

"ಯಾವ ಪದಾರ್ಥಗಳನ್ನೂ ಈವತ್ತು ಖರೀದಿ ಮಾಡಬಾರದೂ, ತೊಗೊಂಡ್ರೆ ನಷ್ಟಾಂತ ಹಾಕಿನ್ದ ನೋಡಿ ಆ ಹೋರಾಸ್ಕೋಪ್ನ ಹಾಗೇನೆ ಅದ್ರಕೆಳಗೆ ಇನ್ನೂ ಒಂದಿತ್ತು ಓದಿದ್ದಿರಾ; ಕೊಳ್ಳುವವರಿಗಿಂತ ಪದಾರ್ಥಗಳನ್ನು ಮಾರುವವರಿಗೆ ಅಧಿಕಲಾಭ ಅಂತ. ನೀವು ಅದನ್ನ ಗಮನಿಸ್ಲೇ ಇಲ್ಲಾ, ನೀವು ಆಫೀಸ್ಗೆ ಹೋದ್ಮೇಲೆ ನಿಧಾನವಾಗಿ ಯೋಚಿಸಿ ಕೂಡ್ಲೆ ನಿಮ್ ಹಳೇಸೈಕಲಿತ್ತಲ್ಲಾ....ಅದ್ನಾ ಮಾರಬಿಟ್ಟರೆ ಲಾಭಾಂತ ನಿರ್ಧರಿಸಿ ಕಬ್ಬಿಣದ್ ಸಾಮಾನುಗಳ್ನ ತೊಗೋತಾನಲ್ಲಾ ಅವನ್ನ ಕರ್ದಿದ್ದೆ...."

"ಅಯ್ಯಯ್ಯೋ! .. ಸೀರೇನಾದ್ರೂ ತೊಗೊಂಡಿದ್ರೇ...."

"ಯಾಕ್ಹೀಗ್ ಕೂಕ್ಕೊಳ್ತೀರಾ! ಮಾರೋವ್ರಿಗ್ತಾನೆ ಕೊಳ್ಳೋ ಲಾಭಾಂತ ಭವಿಷ್ಯಕಾರ ಹೇಳಿದ! "

"ನಿನ್‌ತಲೆ! ಏಳ್‌ರೂಪಾಯ್‌ಗಾ ನೀ ಅದನ್ನ ಮಾರಿದ್ದು? "


"ಏಳ್‌ರೂಪಾಯಿಗೆ ಯಾರ್ ತೊಗೋತಿದ್ರು ಅದನ್ನ. ಎಲ್ಲಾ ಹಳೇ ಸಾಮಾನು....ಒಂದ್ರುಪಾಯ್ ಮೇಲ್ ಕೊಡೊದಿಲ್ಲಾಂತ್ತಿದ್ದ....ನಾನ್ ತುಂಬಾ ಚೌಕಾಶಿ ಮಾಡಿದ್ಮೇಲೆ ಮೂರ್ರುಪಾಯ್ ಕೊಟ್ಟ! ನಿಮಿಗೀಗ ಕೊಟ್ನಲ್ಲಾ ಏಳ ರೂಪಾಯಿ ...ಅದ್ರಲ್ಲಿ ಮೂರ್‌ರುಪಾಯಿ ನಿಮ್ಮ ಸೈಕಲ್ದು, ಬಾಕಿ....ನಾಲ್ಕು ನನ್ದು!...."

"ರಾಮ ರಾಮ ಶ್ರೀರಾಮರಕ್ಷೆ" ಎಂದು ಕುಸಿದ ಶ್ರೀನಿವಾಸ.

—ತಾಯೂರು ರಾಮಚಂದ್ರನ್.

(ತಮಿಳುಕತೆಯ ಆಧಾರದಿಂದ)

---



"ನಮ್ಮ ಆಸ್ಪತ್ರೆ ವಾರ್ಡಿಗಿಂತ ಇಲ್ಲೇ ಗಲಾಟೆ ಕಡಿಮೆ—ವಾರ್ಡುಗೀರ್ಡು ಬೇಡ ಇಲ್ಲೇ ವಾಸಿ."

# ಪತ್ರಿಕಾ ಭೇಟಿ!

ಅಂದು ಹಳೆಯಾರ್ಕಿನ ವಿಮಾನನಿಲ್ದಾಣದಲ್ಲಿ ಅಧ್ಭುತ ಜನಸಂದಣಿ. ಪೋಲೀಸ ಬಂದೊಬಸ್ತು ವಿಪರೀತವಾಗಿದ್ದರೂ ಅದು ಸಾಲುತ್ತದೆಯೋ ಇಲ್ಲವೋ ಎಂದು ಅನುಮಾನಿಸಿ ಒಂದು ಇಂಫೆಂಟರಿ ಪಡೆ ಬೇರೆ ಕರೆಯಲಾಗಿತ್ತು. ಕಾರಣ ಜಗತ್ತಿನ ಸುಪ್ರಸಿದ್ಧ ಶಾಂತಿದೂತರು ಅಂದು ಆ ಊರಿಗೆ ಬರುವವರಿದ್ದರು ಪ್ರಪಂಚ ಶಾಂತಿಗಾಗಿ ಕಳೆದ ಐವತ್ತಾರು ವರ್ಷಗಳಿಂದ ಸತತದುಡಿದು ಅನೇಕ ಶಾಂತಿ ಬಹು ಮಾನಗಳನ್ನು ಪಡೆದಿದ್ದರು. ಜನಸಂದಣಿ ಕಟಕಟಿಯಾಚೆ ನಿಂತಿತ್ತು. ಆದರೆ ಎಂದಿನಂತೆ ನಮ್ಮ ಪತ್ರಿಕಾಪ್ರತಿನಿಧಿಗಳು ನೋಟ್‌ಪುಸ್ತಕ, ಪೆನ್ಸಿಲುಗಳನ್ನು ಸಿದ್ಧ ವಾಗಿಟ್ಟುಕೊಂಡು, ತಮ್ಮ ಫ್ಲಾಷ್ ಕ್ಯಾಮೆರಾಗಳನ್ನ ತಮ್ಮ ಹೊಟ್ಟೆಯಮೇಲೋ, ಹೆಗಲಮೇಲೋ ಇಟ್ಟುಕೊಂಡಿದ್ದರು.

ವಿಮಾನ ಬಂದಿಳಿಯಿತು. ಜನರ ನೂಕುನುಗ್ಗಲು ಆರಂಭವಾಯಿತು. ಪೋಲೀಸಿನವರೂ, ಮಿಲಿಟರಿಯವರೂ ತಮ್ಮ ಬಲವನ್ನೆಲ್ಲಾ ಉಪಯೋಗಿಸಿ ಮಹಾ ಜನ ಸ್ತೋಮವನ್ನು ಹಿಂದಟ್ಟಿದರು.

ವಿಮಾನದ ಪುಟ್ಟ ಏಣಿಯನ್ನು ಅದರ ಬಾಗಿಲ ಹತ್ತಿರಕ್ಕೆ ತಳ್ಳಿದರು. ಮುಖ್ಯ ಅತಿಥಿಗಳು ಅದರ ಮೇಲೊಮ್ಮೆ ಕಾಲಿಟ್ಟು ಸುತ್ತನೋಡಿ, ನಕ್ಕು, ಕೈಮುಗಿದರು. ಇನ್ನೆಲ್ಲೂ ಅವರಿಗೆ ಇಂತಹ ಅದ್ಭುತಸ್ವಾಗತ ದೊರಕಿರಲಿಲ್ಲ.

ಆದರೆ ಇಷ್ಟರಲ್ಲೆ ಪತ್ರಿಕೋದ್ಯೋಗಿಗಳ ಗುಂಪಿನಲ್ಲಿ ಪಿಸುಪಿಸುಮಾತು ಶುರು ವಾಯಿತು. ಕಾರಣ ಮುಖ್ಯ ಅತಿಥಿ–V. I. P–ಗಳ ಹಿಂದೆ ಒಬ್ಬ ವ್ಯಕ್ತಿ, ಅವನ ಅಕ್ಕಪಕ್ಕಗಳಲ್ಲಿ ಚಿರಪರಿಚಿತರಾದ ಸಿ. ಐ. ಡಿ ಖಾತೆಯ ಅತ್ಯುನ್ನತ ಅಧಿಕಾರಿಗಳು ನಿಂತಿದ್ದರು.

ಒಬ್ಬ ಪತ್ರಿಕೋದ್ಯೋಗಿ–ನಿಸ್ಸೀಮ ಆತ ಆ ವ್ಯಕ್ತಿಯನ್ನು ಗುರುತಿಸಿದ: 'ಮಹಾಕೇಡಿ ಭುಜಂಗರಾಯ ಅವನ ತಲೆಯಮೇಲೆ ೫೦,೦೦೦ ರೂಗಳ ಬಹುಮಾನ ವಿತ್ತು–ಅವನೇ' ಎಂದು ನುಡಿದು ಕೂಡಲೇ ತನ್ನ ಕ್ಯಾಮೆರದಿಂದ ಅವನದೊಂದು ಚಿತ್ರವನ್ನು ಸರ್‍ರನೆ ಇಳಿಸಿ, ಅವನೆಡೆಗೆ ಓಡಿದ. ಸರಿ. ಎಲ್ಲ ಪತ್ರಿಕೋದ್ಯೋಗಿಗಳೂ ಅವನ ಹಿಂದೆ ತಾನುಮುಂದು ನೀನುಮುಂದು ಎಂದು ನುಗ್ಗಿ, ಆ ಭುಜಂಗರಾಯ ನನ್ನು ಮುತ್ತಿದರು.

ಅವನಿಗೂ ಅರ್ಥವಾಯಿತು. ಎಲ್ಲರನ್ನೂ ಮುಗುಳುನಗೆಯಿಂದ ನೋಡಿ 'ನಮಸ್ಕಾರ' ಎಂದ.

"ನಿಮ್ಮನ್ನು ಎಲ್ಲಿ ಹಿಡಿದರು?"–ಒಬ್ಬ ಪತ್ರಿಕೋದ್ಯೋಗಿ.

"ಮಿಸಿಸಿಪ್ಪಿ ನದಿಯ ದಡದಲ್ಲಿ."

"ಅಲ್ಲೇನು ಮಾಡುತ್ತಿದ್ದಿರಿ? ಹೇಗೆ ಸಿಕ್ಕಿರಿ? ಸ್ವಲ್ಪ ತಪಶೀಲಾಗಿ ವಿವರಿಸುತ್ತೀರಾ?"–ಇನ್ನೊಬ್ಬ.

"ಅಲ್ಲೇ ನಾನು ಒಬ್ಬ ಲಕ್ಷಾಧಿಪತಿಯನ್ನು ದರೋಡೆ, ಕೊಲೆಮಾಡಿ, ಅವನ ಹೆಂಡತಿಯೊಡನೆ ಮದುವೆ ಅಂದರೆ ...ಹ್ಹಿ....ಹ್ಹಿ....ನಿಮಗೇ ಗೊತ್ತಿರಬೇಕು . ನನಗಿಂತ ಚೆನ್ನಾಗಿ ವರದಿಗಳನ್ನೆಲ್ಲಾ ನಾನು ಓದಿದೆ... ಅದರಲ್ಲೂ ಪೋಲೀಸರಿಗೂ ಸಿಗದ ವಿಷಯಗಳನ್ನು ಅಮೆರಿಕದ ಪತ್ರಿಕೆಗಳು ಪತ್ತೆಹಚ್ಚಿ ಪ್ರಕಟಿಸಿವೆ-ನಾನು ಮಾಡಿದ ದರೋಡೆ, ಕೊಲೆ, ಲಕ್ಷಾಧೀಶ ವಿಧವೆಯೊರಡನೆ ಮದುವೆಗಳೆಲ್ಲ ..."

"ಅವೆಲ್ಲ ನಿಜವೆಂದು ನೀವು ಒಪ್ಪುತ್ತೀರಾ?"

"ಖಂಡಿತ."

"ಅವುಗಳಲ್ಲದೆ ನೀವು ಮಾಡಿದ ಮಹಾಕಾರ್ಯಗಳೇನಾದರೂ ಉಂಟೆ "

"ಬೇಕಾದಷ್ಟಿದೆ....ಈಗ ಹೇಳಲು ಪುರಸೊತ್ತಿಲ್ಲ ಅದರ ಬಗ್ಗೆ ನಾನು ಸಧ್ಯದಲ್ಲೇ ಜೇಲಿನಲ್ಲಿ ಕುಳಿತು ಬರೆಯಲಿರುವ ನನ್ನ ಆತ್ಮಕತೆಯಲ್ಲಿ ಸವಿಸ್ತಾರವಾಗಿ ಬರೆಯುತ್ತೇನೆ....ಅಮೆರಿಕದ ಪ್ರಕಾಶಕರ ಕಂಪನಿಯೊಂದು ಆದನ್ನ ಪ್ರಕಟಿಸಲು ಒಪ್ಪಿ ೪೦,೦೦೦ ಡಾಲರುಗಳನ್ನು ಕೊಡುವುದಾಗಿ ಹೇಳಿದೆ"

"ನಿಮ್ಮನ್ನು ಸೆರೆಹಿಡಿದ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ಆ್ಞ ನನ್ನ ಅಭಿಪ್ರಾಯ ...ಏನುಹೇಳಲಿ ಆದರೆ ನಾನು ಇಷ್ಟು ಬೇಗ ಸಿಕ್ಕಿಹಾಕಿಕೊಳ್ಳುವೆನೆಂದು ನಂಬಿರಲಿಲ್ಲ....ಕಳೆದ ಎಂಟು ವರ್ಷಗಳಿಂದ ಪೋಲೀಸರ ಕಣ್ಣಿಗೆ ಮಣ್ಣೆರಚಿ ಪ್ರಪಂಚದ ಈ ಕೊನೆಯಿಂದ ಆ ಕೊನೆಯವರಿಗೆ ಸುತ್ತಿದೆ.... ಇವತ್ತು ಅಮೆರಿಕ–ನಾಳೆ ಯೂರೋಪಿನಲ್ಲಿ–ನಾಳಿದ್ದು ಜಪಾನ್, ಆದರೆ ಎಂದಿದ್ದರೂ ಕಳ್ಳನ ಹೆಂಡತಿ–ಎಂದು ನಿಮಗೇ ಗೊತ್ತಿದೆ ಆದರೆ ಇದರಿಂದ ನನಗೇನೂ ವ್ಯಥೆಯಿಲ್ಲ ಸ್ವಲ್ಪಕಾಲ ಆರಾಮು ತೆಗೆದುಕೊಳ್ಳುತ್ತೇನೆ....ನಮ್ಮ ಸರ್ಕಾರದವರ ಅತಿಥಿಯಾಗಿ....

"ನೀವು ಹಿಂದೆ ಎಷ್ಟುಸಾರಿ ಜೈಲಿಗೆ ಹೋಗಿದ್ದಿರಿ?"

"ಕಸುಬಿನ ಆರಂಭದಲ್ಲಿ ಏಳೆಂಟುಸಲ ನನ್ನ ಮೂರ್ಖತನದಿಂದ ಜೈಲುಮುಖ ಕಾಣಬೇಕಾಯಿತು....ಆಮೇಲೆ ನಾನು ಪಳಗಿದಮೇಲೆ ಇವೇ ಮೊದಲು...."

ಅಷ್ಟರಲ್ಲಿಯೇ ಅವನ ಹಿಂದೆ ನಿಂತಿದ್ದ ಪೋಲೀಸ್ ಅಧಿಕಾರಿಗಳು ಅವನನ್ನು ಬೇಗ ಈ 'ಪತ್ರಿಕಾ ಭೇಟಿ' ಮುಗಿಸುವಂತೆ ಕೇಳಿಕೊಂಡರು.

ಅಷ್ಟರಲ್ಲೇ ಮತ್ತೊಬ್ಬ ಪತ್ರಿಕೋದ್ಯಮಿ ಕೇಳಿದ" ನಿಮ್ಮದೊಂದು ಸಂದೇಶ ಕೊಡುತ್ತೀರಾ-ಜೈಲು ಸೇರುವ ಮುನ್ನ?"

"ನಾನು ಒಂದು ವಿಧದಿಂದ ಸಾಮಾನ್ಯರು ಮಾಡಲಾರದಂಥ ಸಾಹಸಕಾರ್ಯ ಗಳನ್ನು ಮಾಡಿದ್ದೇನೆ. ಅದರಿಂದ ಪ್ರತ್ಯಕ್ಷವಾಗಿ ನೊಂದವರಿಗೆ, ಕೊಲೆಯಾದವರಿಗೆ ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತೇನೆ. ಆದರೂ ಮಾರ್ಕ್ಸ್‌ನ ವಾದದಲ್ಲಿ ನನಗೆ ನಂಬಿಕೆಯಿದೆ. ಹೆಚ್ಚು ಹಣವಿರುವವರಿಂದ ಹಣ ಕಸಿಯುವುದೇ ನನ್ನಂತಹವರ ಧರ್ಮ ಎಂದು ನಾನು ತಿಳಿದಿದ್ದೇನೆ....ನನ್ನ ಅನೇಕ ಅಪಾಯಕರ ಪರಿಸ್ಥಿತಿಯಲ್ಲಿ, ಅಂದರೆ ಸಿಕ್ಕಿಹಾಕಿಕೊಳ್ಳುವ ಸಂದರ್ಭಗಳಲ್ಲಿ ಅನೇಕರು-ಪರೋಕ್ಷವಾಗಿಯಾದರೂ- ನನಗೆ ನೆರವಿತ್ತಿದ್ದಾರೆ-ಅಷ್ಟೆ ಅಲ್ಲ. ನಾನು ಮಾಡಿದ ತಪ್ಪಿಗೆ ಅವರು-ತೀರ ಏನೇನೂ ತಿಳಿಯದವರು-ಇನ್ನೊಸೆಂಟ್ಸ್-ಸಿಕ್ಕಿಹಾಕಿಕೊಂಡಿದ್ದಾರೆ; ಕಷ್ಟ ಅನುಭವಿಸಿದ್ದಾರೆ. ಅಂತಹವರಿಗೆ ನನ್ನ ಅನುತಾಪಗಳು-ಜೈಹಿಂದ್"

ಮಾರನೆಯದಿನ ಎಲ್ಲ ಪತ್ರಿಕೆಗಳ ಮೊದಲನೆಯ ಪುಟದಲ್ಲಿ ದಪ್ಪ ಅಕ್ಷರಗಳಲ್ಲಿ (೪೦ ಪಾಯಿಂಟು) 'ಭುಜಂಗರಾಯರ ದಸ್ತಗಿರಿ-ಪತ್ರಿಕಾಭೇಟಿ' ಎಂದು ಪುಟದ ತುಂಬ ವರದಿಸಿದ್ದರು.

ಪುಟದ ಕೊನೆಯಲ್ಲಿ 'ಆಗಮನ-ನಿರ್ಗಮನ'ಗಳ ಜಾಗದಲ್ಲಿ ಒಂದು ಸಾಲು:

'ಆಗಮನ—ಪ್ರಖ್ಯಾತ ಶಾಂತಿದೂತರು.'

**ಬಿ. ಎಸ್. ಮೂರ್ತಿ.**

---

ಸಂಜೆಗೆ ಬಂತು ಸಂಬಳ ನನಗೆ
ಸಂಬಳ ದೊಂದಿಗೆ ಪಾರ್ಕಿಗೆ ಇಳಿದೆ;
ಕಬ್ಬನ್ ಪಾರ್ಕಿನ ಹೂವಿನ ಚಕ್ರ
ಹಳದಿ ಕೆಂಪು .. ವಕ್ರವೊ, ವಕ್ರ
ಅಲ್ಲೇ ಕೂತೆ, ನೋಡುತ ನೋಡುತ!
ಸಂಬಳ ಸಹಿತವೆ ನನ್ನನು ಹಿಡಿಯಲು
ದಾರಿ ಕಾಯುವ ಪಠಾನನ ಮರೆತೆ.

---

# ಗಾದೆಗಳ ಹುಟ್ಟು

**ಕೈಗೆ ಕೆಸರಾದರೆ, ಬಾಯಿಗೆ ಮೊಸರು:** ಈ ಗಾದೆ ಮೊದಲಾದದ್ದು, ರಾಯರ ಮನೆಯಲ್ಲಿ. ರಾಯರ ಎಮ್ಮೆಯ ಶುಶ್ರೂಷೆಗೆ ನೇಮಕವಾಗಿದ್ದ ಆಳು ಕೆಸರು ಒಳಿಯಲು ಹಿಂಜರಿದಾಗ, ರಾಯರು, "ಲೋ! ನಿನ್ನ ಕೈ ಕೆಸರಾದರೆ, ನನ್ನ ರಮಾಬಾಯಿಗೆ ಮೊಸರು," ಎಂದು ಗರ್ಜಿಸಿದರಂತೆ.

**ಮಂಗನ ಕೈಯಲ್ಲಿನ ಮಾಣಿಕ್ಯದಂತೆ:** ಅಳಿಯ ಮಹಾಶಯರೊಬ್ಬರು ಮಗಳನ್ನು ತನ್ನ ಮನೆಗೆ ಕರೆದುಕೊಂಡು ಹೋದ; ಎಷ್ಟು ಪತ್ರ ಬರೆದರೂ, ಅತ್ತೆ ಮಾವಂದಿರಿಗೆ ಸಖತ್ ಖಾಯಿಲೆ ಎಂದು ತಂತಿಕೊಟ್ಟರೂ, ಪ್ರಯಾಣದ ಖರ್ಚಿಗಾಗಿ ಹಣ ಮನಿಆರ್ಡರ್ ಮಾಡಿದರೂ, ಮತ್ತೆ ಕರೆದುಕೊಂಡು ಬರಲೇ ಇಲ್ಲ ಆತನ ಮುಷ್ಟಿಯಿಂದ ಆಕೆಯನ್ನು ಬಿಡಿಸಲಾಗದೆ ಪೇಚಾಡಿದ ತಂದೆತಾಯಿಗಳ ಉದ್ಗಾರವೇ ಈ ಗಾದೆ.

**ಪುರಾಣದ ಬದನೆಕಾಯಿ:** ಪುರಾಣವನ್ನು ಓದಿ ವ್ಯಾಖ್ಯಾನ ಮಾಡುತ್ತಿದ್ದವರೊಬ್ಬರು, ಅಂದಂದು ಎಲ್ಲಿಲ್ಲಿಗೆ ಪೂರೈಸಿತು, ಎಂಬ ಗುರುತಿಗಾಗಿ ಆ ಪುಸ್ತಕದ ಹಾಳೆಗಳ ನಡುವೆ, ಕಡ್ಡಿಯನ್ನೋ ಕಾಗದದ ತುಂಡನ್ನೋ ಇಡುವ ಪದ್ಧತಿ ಒಂದುದಿನ, ಅಂಥದ್ದೇನೂ ಸಿಕ್ಕದೆ, ಒಂದು ಬದನೆ ಹೀಚನ್ನಿರಿಸಿದರಂತೆ ನಂತರ, ಹುಣ್ಣಿಮೆ ಪಾಡ್ಯ ಪುರುಡು ಇತ್ಯಾದಿಯಿಂದಾಗಿ, ಹಲವುದಿನ ಪುರಾಣದ ಪುಸ್ತಕವನ್ನು ಬಿಚ್ಚದೆ, ಆ ಬದನೆಕಾಯಿ ಬಾಡಿ ಒಣಗಿ ಹಾಳಾಯಿತು ತಿನ್ನುವುದಕ್ಕೆ ಅಯೋಗ್ಯವಾಯಿತು. ಗಾದೆ ಹುಟ್ಟಿತು.

**ಅತ್ತೆಗೊಂದು ಕಾಲ, ಸೊಸೆಗೊಂದು ಕಾಲ:** ಅತ್ತೆ ಸತ್ತಿದ್ದು ಸಿಡುಬಿನಿಂದ; ಸೊಸೆಗೆ ಕಾಲ ಬಂದದ್ದು ಕ್ಷಯರೋಗದ ರೂಪತಾಳಿ.

**ಮೂರ್ಖಸ್ಯ ದೊಣ್ಣೆ ಔಷಧಂ:** ಮೂರ್ಖ ಎಂದರೆ, ಮೂರು ಖ: ಖರ್ಚು, ಖಾಯಿಲೆ, ಖುಷಿ. ಖರ್ಚು ಹೆಚ್ಚು, ಕಡಮೆಮಾಡಬೇಕು, ಎಂಬುವ ಪರಿಸ್ಥಿತಿಯಲ್ಲಿರುವವರಿಗೆ ಸುಮ್ಮನೆ ದೊಣ್ಣೆಯ ಹಾಗೆ ಒಂದೇಕಡೆ ಊರಿಕೊಂಡು ಕೂರುವುದೇ ಮದ್ದು! ಖಾಯಿಲೆ ಅಂತ ಸುಳ್ಳುನೆಪ ಹೂಡಿ ಹಾಯಾಗಿ ಮಲಗಿರುವವರು ದೊಣ್ಣೆ ನೋಡಿದರೆ ಎದ್ದು ಓಡಾಡುತ್ತಾರೆ! ಖುಷಿ ಹತ್ತಿ ಯದ್ವಾ ತದ್ವಾ, ಇಂಗುತಿಂದ ಕಪಿಯ ಹಾಗೆ ಕುಪ್ಪಳಿಸುವ ಕ್ರಾಕ್ಕಿಗೆ ದೊಣ್ಣೆಯಲ್ಲದೆ ಬೇರೆ ಏನಿದೆ ಮದ್ದು?....ಆದ್ದರಿಂದಲೇ, ಮೂರ್ಖಸ್ಯ ದೊಣ್ಣೆ ಔಷಧಂ.

(ಮುಂದುವರಿಯುವುದು)

—ನಾ. ಕಸ್ತೂರಿ

# ವಿಠ್ಠಲರಾಯನ ವೈದ್ಯಪರೀಕ್ಷೆ

"ಪಿತ್ತವಾಯು ಕೆರಳಿದ ಸಂಕಟ. ರಾತ್ರಿ ಎಲ್ಲಾ ನಿದ್ರೆಯಿಲ್ಲ. ಹುಳಿ ತೇಗು. ಪಪೆಯ ಕೆಳಭಾಗ ಎರಡು ಅಂಗುಲ ಗುಡು ಗುಡು ಗುಡು ಅಂತ ಸದ್ದು. ಪಿತ್ತ ಜನಕಾಂಗ ತನ್ನ ಕೆಲಸ ಸರಿಯಾಗಿ ಮಾಡ್ತಾ ಇಲ್ಲ ಡಾಕ್ಟ್ರೆ ಇದೇ ಯೋಚನೆ ನನಗೆ ಏನುಮಾಡ್ಲಿ?"

—ಎಂದು ವಿಠ್ಠಲರಾಯ ಒಂದೇಸಮ ಹೇಳಿಕೊಂಡ. ಡಾಕ್ಟರು ಪಾಪ ಹೊಸದಾಗಿ ಅಂಗಡಿ ತೆಗೆದಿದ್ದರು. ಕಲಿತ ಪಾಠ, ಆದ ಪ್ಯಾಸು – ಕೊಟ್ಟ ಡಿಗ್ರಿ ಹಿಡಿದು ಅದರ ಬಲದಮೇಲೆ ಧೈರ್ಯವಾಗಿ ಸ್ವಂತ ವೈದ್ಯಕಿ ಅಂಗಡಿ ತೆಗೆದಿದ್ದರು. ಧೈರ್ಯದಿಂದ ಚಿಕಿತ್ಸೆಗೆ ಕೈಹಾಕಿದ್ದರು. ಎಂತಹ ಧೈರ್ಯವಿದ್ದರೂ ವಿಠ್ಠಲರಾಯ ನನ್ನು ಎದುರಿಸುವುದು ಸಾಮಾನ್ಯವಲ್ಲ. ಹೊಸ ವೈದ್ಯ, ಹಳೇ ರೋಗಿ.

ಮಾಮೂಲಿನಂತೆ ಎದೆ ಬಡಿತ, ನಾಡಿ ಮಿಡಿತ, ರಕ್ತದ ಮತ್ತಡ-ಶ್ವಾಶಕೋಶ ಪರಿಶೀಲನೆ ನೋಡಿದರು ಪಾಪ.

"ಡಾಕ್ಟರೆ ತಮ್ಮ ಊರು ಯಾವುದೊ?" ಎಂದು ವ್ಯಂಗವಾಗಿ ಅಣಕು ಧ್ವನಿ ಯಲ್ಲಿ ಕೇಳಿದ ವಿಠ್ಠಲ.

"ಯಳಂದೂರು ಯಾತಕ್ಕೆ ನಮ್ಮ ಊರಿನ ವಿಚಾರ?"

"ಅಲ್ಲ ಕೇಳಿದೆ–ಏನೂ-ತಿಳಕೋಬೇಡಿ ಡಾಕ್ಟರೆ – ನನಗೆ ಹೊಟ್ಟೆಯ ಟ್ರಬಲ್ಲು ಅಂತ ಬಂದಾಗಲೇ ಅರಕೆಮಾಡಿಕೊಂಡ ನೆನಪು – ಈಗ ತಾವು ಶ್ರದ್ಧೆಯಿಂದ ನಾಡಿ ನುಡಿತ ಎದೆಯ ಬಡಿತ ಶ್ವಾಸದಕೋಶ ನೋಡಿದ್ದು ನೋಡಿದರೆ ಯಾವ ಊರೂಂತ ಸಹಜವಾಗಿ ಕೇಳಬೇಕಾಗುತ್ತೆ "

ಡಾಕ್ಟರು ಸುಸ್ತು. ಮೊದಲೆ ಹೊಸದು. ಸರಿ ಮೇಲೆ ಈ ವಿಠ್ಠಲನ ಟೀಕೆ. ಕೊಂಚ ತಬ್ಬಿಬ್ಬೇ ಆದರು ಇಸಮು. ಆದರೂ ತೋರಿಸಿಕೊಳ್ಳದೆ "ಇವೆಲ್ಲಾ ಸರಿ ಯಾಗಿದ್ದರೆ ಹೊಟ್ಟೆ ತನ್ನಷ್ಟಕ್ಕೆ ತಾನೇ ಸರಿಯಾಗಿರತ್ತೇಂತ ವೈದ್ಯಶಾಸ್ತ್ರ ಹೇಳುತ್ತೆ" ಎಂದು ತನ್ನ ಪರೀಕ್ಷೆಯಲ್ಲಿ ತೊಡಗಿದ್ದರು.

"ಸರಿ ನೀವು ಯಳಂದೂರೂಂತ ಅಂದಮೇಲೆ ಹೀಗೆ ನೋಡಬೇಕಾದ್ದೆ. ಅಲ್ಲಿ ಮೊದಲು ಒಬ್ಬ ವೈದ್ಯ'ಇದ್ದನಂತೆ ಅಲ್ಲಿನ ಜಹಗೀರುದಾರರ ಆಸ್ಥಾನದಲ್ಲಿ ಅವನ ಮನೆತನದವರೇನು ನೀವು?" ವಿಠ್ಠಲ ಮತ್ತೆ ಕುಕ್ಕಿದ.

ಎಳೇರಕ್ತ — ಡಾಕ್ಟರಿಗೆ ಈ ರೀತಿಯ ಟೀಕೆ ಸರಿಬರಲಿಲ್ಲ.

"ಸ್ವಾಮೀ—ನೀವು ಔಷಧಿಗೆ ಬಂದವರೋ ಅಥವ ನನ್ನ ವಂಶವೃಕ್ಷ-ವೈದ್ಯಕೀಯದ ಮಟ್ಟ ಅಳಿಯೋಕೆ ಬಂದವರೋ — ನನ್ನ ಪರೀಕ್ಷೆ ನನ್ನ ನಿಯಮ ಸರಿಬಾರದೆ ಇದ್ರೆ ಹೊರಡಬಹುದಲ್ಲಾ"

—ಎಂದು ಕೊಂಚ ಜೋರಾಗೇ ಅಂದರು. ಆದರೆ ವಿಠ್ಠಲರಾಯನ ಶಾಂತ ಮುದ್ರೆ ಮಾಯವಾಗಲಿಲ್ಲ - ಅವನ ಕೊಂಕುನಗೆ ನುಲುಗಲಿಲ್ಲ - ಚೂಪಾದ ನಾಲಗೆಯನ್ನು ಸವರಿಕೊಂಡು ತೀಕ್ಷ್ಣವಾಗಿ ನೋಡಿದ ಆ ಎಳೆಡಾಕ್ಟರನ್ನು.

"ಕೋಪಮಾಡ್ಕೊಬೇಡಿ, ತಮ್ಮ ಹೆಸರೇನು"

"ನಾನು ಕೇಳಬೇಕಾದ್ದು ಅದನ್ನು"

"ಮತ್ತೇ ಹೌದೋ ಅಲ್ವೊ? ಮತ್ತೆ ಯಾತಕ್ಕಪ್ಪ ಕೇಳಲಿಲ್ಲಾ — ಅದು ಕರ್ತವ್ಯಲೋಪವಲ್ಲವೆ?"

"ಮತ್ತೆ ಕರ್ತವ್ಯದ ವಿಚಾರ ತಾವು ಎತ್ತಬೇಡಿ—ನಿಮ್ಮ ಹೆಸರೇನು?"

"ನಿಮ್ಮ ಹೆಸರು?"

"ಹೊರಗಡೆ ಬೋರ್ಡು ಹಾಕಿದ್ದು ನೋಡಲಿಲ್ವೆ—ಹೆಸರಿನ ಮುಂದೆ ಕಷ್ಟಪಟ್ಟು ಓದಿ ಮಹರಾಜರಿಂದ ಪಡೆದ ಡಿಗ್ರಿನೂ ಬರೆದಿದೆ ಓದಿಕೊಳ್ಳಿ...."

"ನನಗೆ ಓದಲಿಕ್ಕೆ ಬಂದಿದ್ದರೆ- ನಿಮ್ಮಆಸ್ಪತ್ರೆಗೇ ಬರ್‍ತಿರಲಿಲ್ಲ. ನಾನು ಕೆಚ್ಚಿನ ಅಚ್ಚಕನ್ನಡಿಗ. ಕನ್ನಡದಲ್ಲಿ ಬೋರ್ಡು ಬರೆಸಿದ್ದರೆ ಓದಬಹುದಿತ್ತು—ನಾನು ನಗುವುದು —ಕೆಮ್ಮುವುದು —ಆಕಳಿಸುವುದು—ಬೈಯ್ಯುವುದು ಅಚ್ಚಕನ್ನಡದಲ್ಲೆ ಡಾಕ್ಟರೇ. ಈಗ ನೀವು ನೋಡಿದಾಗ ಮಿಡಿದ ನಾಡಿಯ ನುಡಿ ಕನ್ನಡದಲ್ಲೇ ಹೊರಹೊಮ್ಮಲಿಲ್ಲವೇ—ಕರ್ನಾಟಕವೇ ನನ್ನ ಜೀವ, ವೈಯಿ ಮನಸ್ಸು ನಾನೂ ಹೊಯಿಸಳ ಕರ್ನಾಟಕ. ನಿಮ್ಮ ಗೋತ್ರಯಾವುದು?"

—ಡಾಕ್ಟರು ಬೆವತಿದ್ದರು. ಪರತಂತ್ರದ ನೌಕರಿಗಿಂತ ಸ್ವತಂತ್ರವಾಗಿ ದವಾಖಾನೆ ತೆಗೆದು ಹಾಯಾಗಿ ಜೀವನ ನಡೆಸೋಣವೆಂದು ಹುರುಪಿನಿಂದ ಪ್ರಾರಂಭಿಸಿದಾಗ ಮೊದಲ ಗಿರಾಕಿಯೇ ಇಂತಹವನು ಸಿಕ್ಕಾಗ ಹೇಗನ್ನಿಸಿರಬೇಕು ಪಾಪ.

"ಸ್ವಾಮಿ ಕ್ಷಮಿಸಿ. ನನಗೆ ಬರೋತರಹ—ನನ್ನ ಗುರುಗಳು ಹೇಳಿಕೊಟ್ಟಿರೋ ಹಾಗೆ ನಿಮ್ಮನ್ನ ನಾನು ನೋಡ್ತೇನೆ. ನಿಮ್ಮ ವ್ಯಥೆ ನೋವು-ಕಾವು ಬೀವು ಹೇಳಿದರೆ ನನಗೆ ತಿಳಿದ ಚಿಕಿತ್ಸೆಮಾಡ್ತೇನೆ"

"ಹಾಗಾದರೆ ನನ್ನ ಹೆಸರು ಬೇಡವೋ?"

"ಬೇಕು—ನಿಮ್ಮ ಹೆಸರು?"

“ ನಿಮ್ಮ ಹೆಸರು? ”

“ನನ್ನ ಹೆಸರು ನಿಮಗೇಕ್ರೀ — ಡಾಕ್ಟರ್ ದಾಮೋದರನ್ ಬಿಎಸ್ಸಿ, ಎಂಬಿ ಬಿಎಸ್, ಆಯ್ತೇ ಸ್ವಾಮೀ. ತಮ್ಮ ನಾಮಾಂಕಿತ ಈಗಲಾದರೂ ತಿಳಿಸ್ತೀರಾ”

“ ಕೋಪಮಾಡ್ಕೊಬೇಡಿ ದಾಮೋದರರೇ-ಇದು ವೈದ್ಯವೃತ್ತಿಗೆ ಯೋಗ್ಯವಾದ ಗುಣವಲ್ಲ ನಾನು ನೋಡಿರೋ ಡಾಕ್ಟರಷ್ಟು ನೀವು ರೋಗಿಗಳನ್ನ ನೋಡಿಲ್ಲ— ನಾನು ಕುಡಿದಿರೋ ಅಷ್ಟು ಔಷಧಿ ನೀವು ನೋಡಿಲ್ಲ — ಈ ಉದರರೋಗದಬಗ್ಗೆ ನನಗಿರುವಷ್ಟು ಅನುಭವ ನಿಮಗಿಲ್ಲ ಗೊತ್ತಾಯ್ತೆ — ಯಳಂದೂರು ಎಳೇನಿಂಬೇಂತ ಅನ್ನೋಕೆ ನನಗೆ ಇಷ್ಟವಿಲ್ಲ ಅದಕ್ಕೇ ಸುಮ್ಮನಿದ್ದೀನಿ-ದಾಮೋದರರ ಹೆಸರಿನ ಹಿಂದೆ ದಡ್ಡ ಎಂದು ಸೇರಿಸಬೇಕಾದೀತು. ನನ್ನ ಹೆಸರು ಕೇಳಿಬಿಟ್ರಲ್ಲಾ ಅದೂ ನಾನು ಸೂಚಿಸಿದಮೇಲೆ — ನನ್ನ ವಯಸ್ಸು ಬೇಡವೆ? ಯಾವ ಪ್ರಮಾಣದಲ್ಲಿ ಔಷಧಿ ಬೆರಸ್ತೀರಿ—ನಿಮ್ಮ ಗುರುಗಳು ಇದನ್ನ ಹೇಳಿಕೊಡಲಿಲ್ವೆ?”

—ವೈದ್ಯರ ಪಿತ್ತ ಕೆರಳಿತು-ಅವರಿಗೇ ಹುಳಿತೇಗು ಬಂತು. ಪಪೆಯ ಮೇಲ್ಗಡೆ ಎಡಭಾಗದಲ್ಲಿ ಟಪಟಪನೆ ಬಡಿದುಕೊಂಡಿತು. ಇಂತಹ ರೋಗಿಯನ್ನು ಯಳಂದೂರು ದಾಮೋದರ ನಿರೀಕ್ಷಿಸಿಯೇ ಇರಲಿಲ್ಲ. ಎಂತಹ ಅನುಭವ! ಪಿತ್ತಜನಕಾಂಗ ನೆತ್ತಿಯಲ್ಲಿ ಕೆಲಸಮಾಡಿತು. ಜೇಬಲ್ಲಿನ ಕರ್ಚೀಫು ತೆಗೆದು ಹುಬ್ಬುಮೇಲಿನ ಸಾಲಾದ ಬೆವರುಹನಿ ಒರಸಿ ಗದ್ಗಸ್ವರದಲ್ಲಿ ಕೇಳಿದ.

“ ನಿಮ್ಮ ವಯಸ್ಸೆಷ್ಟು? ”

“ ನಿಮ್ಮ ವಯಸ್ಸು? ”

“ ಇಪ್ಪತ್ತೆಂಟೂವರೆ”

“ ಸರಿ, ಗೋತ್ರ ಯಾವುದಂದ್ರಿ ”

“ ಕಾಶ್ಯಪಸಗೋತ್ರ ”

“ ತಂದೆ? ”

“ ಇಲ್ಲ ”

“ ತಾಯಿ? ”

“ ಯಳಂದೂರು ”

“ ಜಮೀನು? ”

“ ಇನಾಮ್ತಿ ಮೂವತ್ತೆಕರೆ ”

“ ಮದುವೆ? ”

“ ಇಲ್ಲ ”

"ಇಷ್ಟ"

"ಉಂಟು"

"ಲೇ ೯ ೯ ರುಕ್ಕೂ"

—ಎಂದು ಕೂಗಿದರು ವಿಠ್ಠಲರಾಯರು. ಮಿರು ಮಿರುಗುವ ತೆಳುಸೀರೆಯ ನಕ್ಕಿಒಳಲಂಗದ ಹರಿಣಿಗಣ್ಣೆ — ಕಾಡಿಗೆಧಾರಿ — ಪುಷ್ಪಗುಚ್ಛ ಶಿರೋಶೃಂಗಾರಿ ಮದಗಜವದನೆ—ರುಕ್ಕಿ ಬಂದು ನಿಂತಳು ಡಾಕ್ಟರೆದುರು.

ವಿಠ್ಠಲರಾಯ ಡಾಕ್ಟರನ್ನು ಸಂಪೂರ್ಣ ಪರಿಪೂರ್ಣ ಮೋಡಿಗೆ ಗುರಿಮಾಡಿ ದಂತಿತ್ತು. ವಿಠ್ಠಲರೇ ಹೇಳಿದರು—

"ಸುಂದರಿ ಅಲ್ಲವೆ?"

"ಹೌದು" ಎಂಬಂತೆ ತಲೆ ಆಡಿತು.

"ಒಪ್ಪಿಗೆಯಾಯಿತೆ?"

"ಹೂಂ"— ಎಂದು ಹೇಳಿಯೇಬಿಟ್ಟರು ಬಿಎಸ್ಸಿ, ಎಂಬಿಬಿಎಸ್ ಡಾ|| ದಾಮೋದರರು.

"ಸರಿ ಒಳ್ಳೆ ಚಾಲೂಕಾದ ಹುಡುಗ ನೀನು ಯೋಗ್ಯ-ನಿನ್ನಷ್ಟು ಚೂಟಿಯಾದ ಡಾಕ್ಟರನ್ನೇ ನಾನು ಕಾಣೆ-ನನ್ನ ಮಗಳ ತಾಳಿಪುಣ್ಯ-ನಿನ್ನ ಸ್ಟೆತಸ್ಕೂಪಿನ ಪುಣ್ಯ—ಯೋಗ್ಯವಾಗಿ ಸಂಸಾರಮಾಡ್ಕೊಂಡಿರಿ, ಇಂತಹ ಯೋಗ್ಯವರನನ್ನು ಹುಡುಕಿ ಬಂದಿದ್ದೆ. ಕಡೆಗೆ ಸಿಕ್ಕೆ—ದೇವರು ನಿಮ್ಮಿಬ್ಬರಿಗೂ ಕಲ್ಯಾಣ ಮುಂದಿನ ಲಗ್ನಮಾಸ ದಲ್ಲೇ ಮಾಡಲಿ. ಇನ್ನು ನಾನು ಬೇರೆ ಎಲ್ಲಿಗೆ ಹೋಗಲಿ- ರಾಮಕೃಷ್ಣಾ ಪಾಂಡುರಂಗಾಂತ ನಿನ್ನ ಮನೇಲಿ ಇರ್ತೀನಿ...."

—ಎಂದಾಗ ದಾಮೋದರ ರುಕ್ಕುವಿನ ನೀಳವಾದ ನಾಶಿಕದ ಸೌಂದರ್ಯ ಸವಿಯುತ್ತಿದ್ದ. ರುಕ್ಕು ಸೆರಗಿನ ತುದಿ ಹೊಸೆದು ಚಾವಟಿಮಾಡುತ್ತಿದ್ದಳು.

"ನಾನು ಹೇಳಿದ್ದು ಗೊತ್ತಾಯ್ತೆ?" ಎಂದು ಮತ್ತೆ ವಿಠ್ಠಲರಾಯ ಹೇಳಿದಾಗ ಡಾ|| ದಾಮೋದರರು—

"ಹೂಂ ಮಾವಯ್ಯ" ಎಂದರು.

ಮೂವರನ್ನೂ ಹೇರಿಕೊಂಡ ಕಾರು ದಾಮೋದರನ ಮನೆಯತ್ತ ಸಾಗಿತ್ತು.

—ದಾಶರಥಿ ದೀಕ್ಷಿತ್.

---



# ಬೆಕ್ಕುಗಳಿದ್ದರೆ

## ಶಾಂತಿಯು ನಿರ್ಮೂಲ

ಬೆಕ್ಕುಗಳನ್ನು ರೇಗಿಸಿದವನಿಗೆ ಈ ಜನ್ಮದಲ್ಲಿ ಶಾಂತಿ ಸಿಗದೆಂದೂ, ಸತ್ತು ಸಮಾಧಿಯಾಗುವಾಗ ಚಂಡಮಾರುತ ಮತ್ತು ಮಳೆಯಾಗುವುದೆಂದೂ ಜರ್ಮನಿಯಲ್ಲಿ ಒಂದು ನಂಬಿಕೆ ಇದೆ.

ಪ್ರತಿಯೊಬ್ಬ ಮಾನವನೂ ಶಾಂತಿಗಾಗಿ ಹಾತೊರೆಯುತ್ತಾನೆ ಮತ್ತು ಭವಿಷ್ಯವು ನಿಷ್ಕರ್ಷೆಯಾದಾಗ ಮಾನವನ ಆತ್ಮಶಕ್ತಿಯು ಬಲಯುತವಾಗುತ್ತದೆ.

ಬಾಂಬೆ ಮ್ಯೂಚುಎಲ್‌ರವರಲ್ಲಿ ವಿಮೆ ಮಾಡುವುದರಿಂದ ನೀವು ಆರ್ಥಿಕ ಭದ್ರತೆಯನ್ನು ಹೊಂದುವಿರಿ.





**ಎಂಡೋಮೆಂಟ್ ಅಷ್ಯೂರೆನ್ಸ್**

ಹಣ ಶೇಖರಿಸಿಡಲು ಅತ್ಯುತ್ತಮ ಮಾರ್ಗ ವಿಮಾದಾತನು ಇಲ್ಲ ಯುವಾದಲ್ಲಿ ಸಂಸಾರಕ್ಕೆ ರಕ್ಷಣೆ ಈಯುವುದು ಹಿರಿಯ ವಯಸ್ಸಿನಲ್ಲಿ ಆತನಿಗೇ ಕೈನೆರವಾಗುತ್ತದೆ.

ಸ್ಥಾಪನೆ:
1871

ದಿ

**ಬಾಂಬೆ ಮ್ಯೂಚುವಲ್**
**ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್,**

ಬಾಂಬೆ ಮ್ಯೂಚುವಲ್ ಬಿಲ್ಡಿಂಗ್,
ದಾಧಾಬಾಯಿ ನೌರೋಜಿ ರೋಡ್, ಬೊಂಬಾಯಿ 1

ಬೆಂಗಳೂರು ಬ್ರಾಂಚ್ ಕಛೇರಿ:— **172/3, ನರಸಿಂಹರಾಜಾ ರಸ್ತೆ, ಬೆಂಗಳೂರು 2.**

**EVERY POLICYHOLDER A SHAREHOLDER**

## ಶೀಘ್ರದಲ್ಲಿಯೇ ಬರುತ್ತದೆ.



ಜೀವವಿಮೆಯು

ಗಂಡನ ಕರ್ತವ್ಯ,

ಹೆಂಡತಿಯ ಭಾಧ್ಯತೆ

ಮತ್ತು ಮಗುವಿನ ಹಕ್ಕು

# ಮೈಸೂರು ಸರ್ಕಾರದ ವಿಮಾ ವಿಭಾಗ

ಪೂರ್ಣ ಭದ್ರತೆ ★ ಒಟ್ಟು ಮೊಬಲಗು 300,00,000 ಕ್ಕೂ ಮೀರಿದೆ

ಕಡಿಮೆ ಪ್ರೀಮಿಯಂ ★ ಪಾವತಿಯಾದ ಮೊಬಲಗು 100,00,000

ಅತ್ಯಧಿಕ ಬೋನಸ್ಸು ★ ಅತಿ ಕಡಿಮೆಯಾದ ಶೇಕಡಾ ಖರ್ಚು

ಸಾರ್ವಜನಿಕ ವಿಭಾಗದಲ್ಲಿ

★

ಇಂದೇ ವಿಮೆ ಮಾಡಿರಿ.

ಮೋಟಾರು ವಿಮೆಯನ್ನು ಕೂಡ ಪೈಪೋಟಿಯ ದರಗಳಲ್ಲಿ ಮಾಡಲಾಗುತ್ತದೆ.

ಇಲಾಖೆಗೆ ಪಾವತಿಮಾಡಬೇಕಾದ ಹಣವನ್ನು ಕಛೇರಿಯ ಕ್ಯಾಷ್ ಸೆಕ್ಷನ್‌ನಲ್ಲಿ ಸ್ವೀಕರಿಸಲಾಗುತ್ತೆ.

★

ದಯವಿಟ್ಟು ವಿಚಾರಿಸಿ

ಕಾರ್ಯದರ್ಶಿ

## ಮೈಸೂರು ಸರ್ಕಾರದ ವಿಮಾ ಇಲಾಖೆ

ಬೆಂಗಳೂರು.

ತಾರು : " ಇನ್ಸೆಕ್ " ಫೋನು : 2918




# ಕ್ಯೂ ನಿಂತು ಬೇಸತ್ತಾಗ...

ನಿಮ್ಮ ದೇಹ ಮನಸ್ಸು ಎರಡೂ ನೆಮ್ಮದಿಯಿಂದಿರುವುದಿಲ್ಲ - ಅಲ್ಲವೆ?
ಮನಸ್ಸಿಗೆ ಉಲ್ಲಾಸವನ್ನೂ ದೇಹಕ್ಕೆ ಚೈತನ್ಯವನ್ನೂ ಕೊಡುವ
ಸಾಧನವೆಂದರೆ ಸ್ನಾನ! ಸ್ನಾನಕ್ಕೆ ಮೈಸೂರು ಸ್ಯಾಂಡಲ್ ಸೋಪು
ಮರೆಯಬೇಡಿ ಮತ್ತೆ

## ಮೈಸೂರು ಸ್ಯಾಂಡಲ್ ಸೋಪು

ದೇಹದ ಕಶ್ಮಲವನ್ನು
ನಿವಾರಿಸುವುದಲ್ಲದೆ
ಮೃದು ಮಧುರವಾದ
ಸುವಾಸನೆಯನ್ನು
ಕೊಡುತ್ತದೆ




**ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ, ಬೆಂಗಳೂರು.** MEMBER ISTM.S

## THE CANARA MUIUAL ASSURANCE Co., Ltd.

Managing Director :—T. R. A. PAI

Head Office: UDIPI, S. India] [Estd: 1935

**ಅತ್ಯುತ್ತಮ ಬೋನಸ್**

ಲಾಭ ಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

| | |
|---|---|
| ರೂ. 18/- | ರೂ. 15/- |
| ಹೋಲ್ ಲೈಫ್ ಎಶ್ಯೂರೆನ್ಸಿಗೆ | ಎಂಡೋಮೆಂಟ್ ಎಶ್ಯೂರೆನ್ಸಿಗೆ |

31-12-1953ನೇ ತಾರೀಖಿಗಾದ 1951 ರಿಂದ 1953ರ ವರೆಗಿನ ಅವಧಿಯ ವಿಮಾ ಗಣನೆಯ ಫಲಿತಾಂಶ.

**ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.**

ಪ್ರಧಾನಕಾರ್ಯಾಲಯ: ಉಡುಪಿ, ದ. ಭಾರತ] [ಸ್ಥಾಪನೆ: 1935

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

UDIPI, S INDIA


# ಕೊರವಂಜಿ


ಕೊರವಂಜಿಯು ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು. ಒಪ್ಪಿದ ಲೇಖನಗಳಿಗೆ ಪ್ರತ್ಯುತ್ತರ ಉಂಟು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಒಳೇಪೇಟೆ, ಬೆಂಗಳೂರು ೨

**ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೩—೦—೦**
**ಬಿಡಿ ಪ್ರತಿ ಕೇವಲ ಆಣೆ ೦—೪—೦**

**ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ ಬಹಳ ಸಹಾಯ ಮಾಡಿದಂತಾಗುವುದು.**




# ವೈಟೋಫೆರಿನ್

## (ಆಧುನಿಕ ಶಕ್ತಿವರ್ಧಕ ಟಾನಿಕ್)

ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ, ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಾಧುರವಾಗಿಯೂ ಇದೆ.

ತಯಾರಕರು :

**ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರಟರಿ ಲಿಮಿಟೆಡ್,**

ಮಲ್ಲೇಶ್ವರಂ - - - ಬೆಂಗಳೂರು 3.

# ಕಿರ್ಲೋಸ್ಕರ್

## ಕಬ್ಬಿನ ಗಾಣಗಳು

---




ಎತ್ತುಗಳ ಸಹಾಯದಿಂದ ನಡೆಸಲ್ಪಡುವ

**ಕರಾಮತ್ ಗಾಣ**

ವಿದ್ಯುತ್ಸಹಾಯದಿಂದಲೋ ಅಥವಾ ಆಯಿಲ್ ಎಂಜಿನ್ನಿ
ನಿಂದಾಗಲಿ ನಡೆಸಲು ಅನುಕೂಲವಾಗಿರುವ
ಮಾದರಿಯೂ ಇರುತ್ತೆ.

ವಿದ್ಯುತ್ಸಹಾಯದಿಂದಲೋ ಅಥವಾ
ಆಯಿಲ್ ಎಂಜಿನ್ ಸಹಾಯದಿಂದ
ನಡೆಸಲ್ಪಡುವ

**ವಸಂತ್ ಗಾಣ**



**ರೆಡಿ ಸ್ಟಾಕಿನಿಂದ ದೊರೆಯುತ್ತೆ.**

★

**ಕಿರ್ಲೋಸ್ಕರ್ ಬ್ರದರ್ಸ್, ಲಿ.**

ಶ್ರೀ ನರಸಿಂಹರಾಜ ರಸ್ತೆ,

ಪೋಸ್ಟ್ ಬಾಕ್ಸ್ ೬೦೪, : : ಬೆಂಗಳೂರು ೨.


Printed by B. S. Iyengar, Bangalore City
Publisher—B. N. Gupta. Editor—M. Sivaram